ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತ ಮೂಲಕ ಟಾಟಾ ಕೆಮಿಕಲ್ಸ್ ಕಂಪನಿಯು ಕೆನ್ಯಾದಲ್ಲಿ ಕಾರ್ಯಾಚರಣೆಯನ್ನು ಕೊನೆಗೊಳಿಸಬೇಕೆಂದು ಅಧ್ಯಕ್ಷ ವಿಲಿಯಮ್ ರುಟೊ ಗುರುವಾರ ಆದೇಶಿಸಿದ್ದಾರೆ.

04 ಸೆಪ್ಟೆಂಬರ್, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -173 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಬೃಂದಾವಿಹಾರಿ ರಿಲೀಸ್ ಡೇಟ್ ಅನೌನ್ಸ್ » 2



ವಿಶೇಷ ಅಧಿವೇಶನಕ್ಕೆ ವಿಜಯೇಂದ್ರ ಒತ್ತಾಯ » 3



ನೇಪಾಳ ದುರಂತ : ನಾಪತ್ತೆಯಾದ ಸಾವಿರಾರು ಶವಗಳು » 4

# ರಾಜ್ಯದಲ್ಲಿ ಬರ: ಚರ್ಚೆಗೆ ವಿಶೇಷ ಅಧಿವೇಶನ

## ಸೆ.21ರಿಂದ ಮೂರು ದಿನ ಕಲಾಪ : ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಎದುರಾಗಿರುವ ಬರ ಪರಿಸ್ಥಿತಿ ಕುರಿತು ವಿಸ್ತೃತವಾಗಿ ಚರ್ಚಿಸಲು ಸೆ.21 ರಿಂದ ಮೂರು ದಿನಗಳ ಕಾಲ ವಿಧಾನ ಮಂಡಲದ ವಿಶೇಷ ಅಧಿವೇಶನ ನಡೆಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಮೊದಲು ನಡೆದ ಅಧಿವೇಶನದಲ್ಲಿ ಸಚಿವ ಸ್ಥಾನಕ್ಕೆ ಬಿ.ನಾಗೇಂದ್ರ ರಾಜೀನಾಮೆ ನೀಡಬೇಕೆಂದು ವಿರೋಧ ಪಕ್ಷಗಳು ಗದ್ದಲ ನಡೆಸಿದ್ದರಿಂದ ಬರ ಸ್ಥಿತಿ ಬಗ್ಗೆ ಚರ್ಚೆಯೇ ನಡೆದಿರಲಿಲ್ಲ. ಹೀಗಾಗಿ ಸೆ.21 ರಿಂದ 24ರವರೆಗೆ ವಿಶೇಷ ಅಧಿವೇಶನ ನಡೆಸಲು ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

ಸಂಪುಟ ಸಭೆ ಬಳಿಕ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಈ ಬಾರಿ ಮುಂಗಾರು ಮಳೆ ಕೈಕೊಟ್ಟಿರುವುದರಿಂದ ರೈತರು ಸಂಕಷ್ಟದಲ್ಲಿದ್ದಾರೆ. ರೈತರ ಜೀವನದ ಮೇಲೆ ಪರಿಣಾಮ



ಬೀರಿದ್ದು, ಈ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡುವ ಸಲುವಾಗಿ ವಿಶೇಷ ಅಧಿವೇಶನ ಕರೆಯಲಾಗಿದೆ. ಕಸ್ತೂರಿ ರಂಗನ್ ವರದಿಯೂ ಚರ್ಚೆಗೆ ಬಂದಿದೆ. ಪರ ವಿರೋಧವಿದ್ದು, ಜನರಿಗೆ ತಿಳಿಸಬೇಕಾಗಿದೆ ಎಂದು ಹೇಳಿದ್ದಾರೆ.

ರಾಜ್ಯದ ರೈತರು ಸಂಕಷ್ಟದಲ್ಲಿದ್ದಾರೆ, ಅನೇಕ ಜ್ವಲಂತ ಸಮಸ್ಯೆಗಳಿವೆ. ಹೀಗಿದ್ದರೂ ಸದನದಲ್ಲಿ ಚರ್ಚೆ ಮಾಡಲು ಅವಕಾಶಗಳು ಸಿಗುತ್ತಿಲ್ಲ. ಅದರಲ್ಲೂ ಈ ವರ್ಷ ಭೀಕರವಾದಂತಹ ಬರಗಾಲ ಇದೆ. 150 ವರ್ಷಗಳಲ್ಲಿ ಇಂತಹ ಬರಗಾಲ ಬಂದಿರಲಿಲ್ಲ, ಸೂಪರ್ ಎಲ್ ನಿನೋ ಬಂದಿದೆ. ಇದರ ಪರಿಣಾಮ ರೈತನ ಜೀವನಕ್ಕೆ ಆಗೋದರ ಜೊತೆಗೆ ಇಡೀ ರಾಜ್ಯದ ಸಮುದಾಯಕ್ಕೆ ಅದರ ಎಕಾನಮಿ ಇರಬಹುದು, ಜನಗಳ ಆಹಾರ ಇರಬಹುದು, ಇವೆಲ್ಲದಕ್ಕೂ ಎಫೆಕ್ಟ್ ಆಗಿದೆ. ಇದರ ಬಗ್ಗೆ ಸುದೀರ್ಘ ಚರ್ಚೆ ಆಗಬೇಕಿದೆ ಎಂದರು.

ಕಸ್ತೂರಿ ರಂಗನ್ ವರದಿ ಈಗ ಮತ್ತೆ ಚರ್ಚೆಗೆ ಬಂದಿದೆ. ಈಗಾಗಲೇ ನಾಲ್ಕೈದು ಬಾರಿ ತಿರಸ್ಕಾರ ಮಾಡಿದ್ದೇವೆ. ಆದರೂ ಕೂಡ ಇನ್ನು ಅದರ ಬಗ್ಗೆ ಚರ್ಚೆಗಳು ಬರುತ್ತಿವೆ. ಈ ಬಗ್ಗೆಯೂ ಅಧಿವೇಶನದಲ್ಲಿ ಚರ್ಚೆ ಆಗಬೇಕಿದೆ. ಜೊತೆಗೆ ರಾಜ್ಯದಲ್ಲಿ ಹೊಸ ಜಾಗತಿಕ ಹೂಡಿಕೆ ಮತ್ತು ವಿದೇಶಾಂಗ ವ್ಯವಹಾರಗಳ ಇಲಾಖೆ ಸ್ಥಾಪನೆಗೆ ತೀರ್ಮಾನಿಸಲಾಗಿದೆ. ವಿದೇಶಾಂಗ ವ್ಯವಹಾರಗಳ ಹೆಸರು ಮುಂದೆ ಬದಲಾಗಬಹುದು. ಈ ಯೋಜನೆ ಮೂಲಕ ಎನ್‌ಆರ್‌ಐ ಕಾರ್ಡ್ ವಿತರಣೆ ಮಾಡುವ ಜೊತೆಗೆ ಉದ್ಯೋಗ ಅವಕಾಶ ನೀಡಲು ಈ ಯೋಜನೆ ನೆರವು ನೀಡಲಿದೆ ಎಂದು ಹೇಳಿದರು.

ಈ ಇಲಾಖೆ ಸ್ಥಾಪನೆಯಿಂದ ಉದ್ಯೋಗ ಅವಕಾಶಗಳಿಗೆ ನೆರವು ಸಿಗಲಿದೆ. ವಿದೇಶಿ ನಿಯೋಗಗಳ ಪಾಲುದಾರಿಕೆ, ಸಹಯೋಗ, ಹೂಡಿಕೆ ನಿರೀಕ್ಷೆಯೊಂದಿಗೆ ಬರುವವರನ್ನು

» ನಾಲ್ಕನೇ ಪುಟದಲ್ಲಿ

### ಉದ್ಯಾನವನಗಳ ಸಂರಕ್ಷಣೆ ತಿದ್ದುಪಡಿ ವಾಪಾಸ್

ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಮಸೂದೆ-2026 ಅನ್ನು ವಾಪಾಸ್ ಪಡೆಯಲು ಸಚಿವ ಸಂಪುಟ ನಿರ್ಧರಿಸಿದೆಯಾದರೂ ಅಧಿವೇಶನದಲ್ಲಿ ಮತ್ತೆ ಮಂಡನೆ ಮಾಡುವುದಾಗಿ ಜಿ. ಪರಮೇಶ್ವರ್ ತಿಳಿಸಿದ್ದಾರೆ. ಮಸೂದೆಯನ್ನು ಸದ್ಯಕ್ಕೆ ವಾಪಾಸ್ ಪಡೆದು ಸಾರ್ವಜನಿಕ ಚರ್ಚೆಗೆ ಮುಕ್ತಗೊಳಿಸಲಾಗುವುದು. ಮಸೂದೆಯಲ್ಲಿರುವ ಅಂಶಗಳ ಬಗ್ಗೆ ಸ್ಪಷ್ಟನೆ ನೀಡಲು ಹಾಗು ಸಾರ್ವಜನಿಕರಿಂದ ವ್ಯಕ್ತವಾಗಿರುವ ಆತಂಕಗಳನ್ನು ಪರಿಹರಿಸಲು ಮುಂದಿನ ಅಧಿವೇಶನದವರೆಗಿನ ಅವಧಿಯನ್ನು ಸರ್ಕಾರ ಬಳಸಿಕೊಳ್ಳಲಿದೆ. ಮಸೂದೆಯನ್ನು ಮತ್ತಷ್ಟು ಚರ್ಚೆಗೆ ಒಳಪಡಿಸಿ, ಅಗತ್ಯ ಸ್ಪಷ್ಟನೆ ಹಾಗು ಬದಲಾವಣೆಗಳ ಬಳಿಕ ಮುಂದಿನ ಅಧಿವೇಶನದಲ್ಲಿ ಮತ್ತೆ ಮಂಡಿಸಲಾಗುವುದೆಂದು ಹೇಳಿದರು.

# ಚೇತರಿಕೆ ಹಾದಿಯಲ್ಲಿ ಆರ್ಥಿಕತೆ: ಮೋದಿ ಸಂತಸ

• ಪ್ರಜೋದಯ ವರದಿ

**ಬೆಲ್ಜಿಯಂ:** ಪ್ರಪಂಚದ ಹಲವು ಭಾಗಗಳಲ್ಲಿ ಸಂಘರ್ಷಗಳಿಂದ ಪರಿಸ್ಥಿತಿ ಹದಗೆಟ್ಟಿರುವ ನಡೆಯೂ ಭಾರತ ಶೇ. 7.8 ಆರ್ಥಿಕ ಬೆಳವಣಿಗೆ ಯೊಂದಿಗೆ ಅಭಿವೃದ್ಧಿಯತ್ತ ದಾಪುಗಾಲಿಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸಂತಸ ವ್ಯಕ್ತಪಡಿಸಿದ್ದಾರೆ.

ಬೆಲ್ಜಿಯಂ ಪ್ರಧಾನಿ ಬಾರ್ಟ್ ಡಿ ವೆವರ್ ಅವರೊಂದಿಗೆ ಗುರುವಾರ ವ್ಯಾಪಾರ, ರಕ್ಷಣೆ, ನಿರ್ಣಾಯಕ ಖನಿಜಗಳು, ಶುದ್ಧ ಇಂಧನ ಮತ್ತು ತಂತ್ರಜ್ಞಾನಗಳಲ್ಲಿ ಸಹಕಾರಕ್ಕೆ ಸಂಬಂಧಿಸಿ ಸುದೀರ್ಘ ಚರ್ಚೆ ಬಳಿಕ ಅವರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಕಳೆದ ತ್ರೈಮಾಸಿಕದಲ್ಲಿ ಭಾರತದ ಶೇ. 7.8 ರಷ್ಟು ಆರ್ಥಿಕ ಬೆಳವಣಿಗೆ ಸಾಧಿಸಿದೆ. ಜಗತ್ತು ದೊಡ್ಡ ಕ್ರಾಂತಿಗಳನ್ನು ಎದುರಿಸುತ್ತಿದೆ. ಅದು ಆಹಾರ, ಇಂಧನ ಅಥವಾ ಪೂರೈಕೆ ಸರಪಳಿಗಳಾಗಿರಲಿ ಪ್ರತಿಯೊಂದು ವಲಯವು ಅನಿಶ್ಚಿತತೆಯಿಂದ ಪ್ರಭಾವಿತವಾಗಿದೆ. ಈ ಸವಾಲಿನ ವಾತಾವರಣದಲ್ಲಿ ಭಾರತದ ಆರ್ಥಿಕತೆಯು



ತನ್ನ ವೇಗವನ್ನು ಕಾಯ್ದುಕೊಂಡಿದೆ. ಭಾರತದ ಬೆಳವಣಿಗೆಯ ಕಥೆಯು ವಿಶ್ವಕ್ಕೆ ವಿಶ್ವಾಸ ಮತ್ತು ಹೊಸ ಅವಕಾಶಗಳ ಮೂಲವಾಗುತ್ತಿದೆ ಎಂದರು.

ನಾವು ಎರಡೂ ದೇಶಗಳ ನಡುವಿನ ಮಿಲಿಟರಿ ವಿನಿಮಯ ಮತ್ತು ತರಬೇತಿ ಸಹಕಾರ ಹೆಚ್ಚಿಸಲು ಒಪ್ಪಿಕೊಂಡಿದ್ದೇವೆ. ನಮ್ಮ ಸರ್ಕಾರ ಮತ್ತು ರಕ್ಷಣಾ ಕೈಗಾರಿಕೆಗಳ ನಡುವಿನ ಒಪ್ಪಂದಗಳು ರಕ್ಷಣಾ ಸಹ-ಅಭಿವೃದ್ಧಿ ಮತ್ತು ಸಹ-ಉತ್ಪಾದನೆಗೆ ಹೊಸ ಅವಕಾಶ ತೆರೆಯುತ್ತವೆಂದು ಹೇಳಿದರು.

ಎರಡು ರಾಷ್ಟ್ರಗಳ ನಡುವಿನ ಜನರಿಂದ ಜನರ ನಡುವಿನ ಸಂಬಂಧಗಳು ತೊಡಗಿಸಿಕೊಳ್ಳುವಿಕೆಯ ದೊಡ್ಡ ಶಕ್ತಿಯಾಗಿದೆ. ಸ್ಟಾರ್ಟ್ ಅಪ್‌ಗಳ ನಡುವಿನ ಸಂಪರ್ಕಗಳನ್ನು ಬಲಪಡಿಸಲು ಮತ್ತು ಕಡಲ ವಲಯದಲ್ಲಿ ಸಾಮರ್ಥ್ಯ ವೃದ್ಧಿಗೆ ಎರಡೂ ಕಡೆಯವರು ಒಪ್ಪಿಕೊಂಡಿದ್ದಾರೆ. ನಾವು ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಸಹಕಾರವನ್ನು ಬಲಪಡಿಸುತ್ತೇವೆ. ಪ್ರತಿಭಾ ಚಲನಶೀಲತೆಯನ್ನು ಸುಗಮಗೊಳಿಸಲು ಶೀಘ್ರದಲ್ಲೇ ವಲಸೆ ಮತ್ತು ಚಲನಶೀಲತೆ ಪಾಲುದಾರಿಕೆ ಒಪ್ಪಂದ ವನ್ನು ಅಂತಿಮಗೊಳಿಸುತ್ತೇವೆಂದು ಹೇಳಿದರು.

ಭಾರತ ಮತ್ತು ಬೆಲ್ಜಿಯಂ ಎರಡೂ ಕಾನೂನು, ಸಂವಾದ ಮತ್ತು ರಾಜತಾಂತ್ರಿಕತೆಯ ನಿಯಮವನ್ನು ನಂಬುತ್ತವೆ. ಅದು ಉಕ್ರೇನ್ ಆಗಿರಲಿ ಅಥವಾ ಪಶ್ಚಿಮ ಏಷ್ಯಾ ಆಗಿರಲಿ, ಸಂಘರ್ಷಗಳ ಆರಂಭಿಕ ಅಂತ್ಯ ಮತ್ತು ಶಾಂತಿಗಾಗಿ ನಾವು ಎಲ್ಲಾ ಪ್ರಯತ್ನಗಳನ್ನು ಬೆಂಬಲಿಸುತ್ತೇವೆ. ಭಾರತ ಮತ್ತು ಬೆಲ್ಜಿಯಂ ಎಲ್ಲಾ ರೀತಿಯ ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡಲು ಬದ್ಧವಾಗಿವೆ ಎಂದು ಪ್ರಧಾನಿ ಹೇಳಿದರು.

# 2.20 ಕೋ.ರೂ. ವೆಚ್ಚದ ಕಾಮಗಾರಿಗೆ ಚಾಲನೆ



• ಪ್ರಜೋದಯ ವರದಿ

**ಹಳೇಬೀಡು:** ಹೋಬಳಿಯ ಘಟ್ಟದಳ್ಳಿ ಹಾಗು ಸುತ್ತಮುತ್ತಲ ಗ್ರಾಮಗಳಲ್ಲಿ 2.20 ಕೋ.ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಹೆಚ್.ಕೆ. ಸುರೇಶ್ ಅವರು ಭೂಮಿ ಪೂಜೆ ನೆರವೇರಿಸಿದರು. ಇದೇ ವೇಳೆ ಘಟ್ಟದಳ್ಳಿ ಪುರಾತನ ಕೆರೆಗೆ ಗ್ರಾಮಸ್ಥರೊಂದಿಗೆ ಸಾಂಪ್ರದಾಯಿಕವಾಗಿ ಬಾಗಿನ ಅರ್ಪಿಸಿದರು.

ಈ ವೇಳೆ ಮಾತನಾಡಿದ ಅವರು, ಎತ್ತಿನಹೊಳೆ ಹಾಗೂ ನೀರಾವರಿ ಇಲಾಖೆಯ ಅನುದಾನದಲ್ಲಿ ಘಟ್ಟದಳ್ಳಿ, ರೈತರ ಕೊಪ್ಪಲು, ಬ್ರಾಹ್ಮಣರಹಟ್ಟಿ ಹಾಗು ಮಾಚೇನಹಳ್ಳಿ ಸೇರಿ ವಿವಿಧ ಪ್ರದೇಶಗಳಲ್ಲಿ ಸುಮಾರು 3.5 ಕಿ.ಮೀ. ಮುಖ್ಯ ರಸ್ತೆ, 300 ಮೀಟರ್‌ಗೂ ಹೆಚ್ಚು ಸಿಸಿ ರಸ್ತೆ ಹಾಗು 5 ಲ.ರೂ. ವೆಚ್ಚದ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಸೇರಿ ಹಲವು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು.

ಘಟ್ಟದಳ್ಳಿ, ಆಡುಗೂರು ದಾಸಗೋಡನಹಳ್ಳಿ, ಗೋಣಿಸೋಮನಹಳ್ಳಿ ಕೆರೆಗಳಿಗೆ ಎತ್ತಿನಹೊಳೆ ಯೋಜನೆಯಡಿ ನೀರು ಹರಿಸಲಾಗುತ್ತಿದ್ದು, ಶೀಘ್ರ ದ್ಯಾವಪ್ಪನಹಳ್ಳಿ ಕೆರೆಯೂ ಭರ್ತಿಯಾಗಲಿದೆ. ಸಾಣೇನಹಳ್ಳಿವರೆಗಿನ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗಿ ಕೃಷಿ, ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಅನುಕೂಲವಾಗಲಿದೆ ಎಂದರು.ತಾ.ಪಂ. ಮಾಜಿ ಅಧ್ಯಕ್ಷೆ ಸುಧಾ ಸುರೇಶ್, ಗ್ರಾಮಸ್ಥರು, ಅಧಿಕಾರಿಗಳಿದ್ದರು.

# ನಿಧಾನಗತಿಯಲ್ಲಿ ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಬೇಲೂರು ಹಾಗು ಹಾಸನ ತಾಲ್ಲೂಕಿನ ಕೃಷಿ ಮತ್ತು ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಯಗಚಿ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ ಮೂಲಕ ನೀರು ಹರಿಸುವ ಮಹದಾಸೆಯೊಂದಿಗೆ ಕೈಗೆತ್ತಿಕೊಂಡ ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿ ದಶಕಗಳಿಂದ ಕುಟುಂತಾ ಸಾಗಿದೆ.

ಎರಡು ಹಂತದ ಕಾಮಗಾರಿ ನಿಧಾನಗತಿಯಲ್ಲಾದರೂ ಪೂರ್ಣಗೊಂಡು ಮೂರನೇ ಹಂತಕ್ಕೆ ಬಂದು ನಿಂತಿದೆ. ಒಟ್ಟು 3735 ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆ ಪೂರ್ಣಗೊಳ್ಳಬೇಕೆಂದರೆ 70 ಕೋ.ಟಿ.ರೂ. ಅನುದಾನದ ಅವಶ್ಯವಿದೆ. ಶಾಸಕ ಹೆಚ್.ಪಿ.ಸ್ವರೂಪ್ ಅವರು 2023ರಿಂದಲೂ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದರೂ ಅನುದಾನ ದೊರೆತಿಲ್ಲ. ಹೀಗಾಗಿ ಅಚ್ಚುಕಟ್ಟು ಪ್ರದೇಶದ ರೈತರು ತೀವ್ರ ತೊಂದರೆ ಅನುಭವಿಸುವಂತಾಗಿದೆ.

ಕ್ಯಾತನಹಳ್ಳಿ ಏತ ನೀರಾವರಿ ಮೊದಲನೇ ಹಂತದ ಮುಖ್ಯ ಕಾಲುವೆಯ ಸರಪಳಿ 2.00 ಕಿ.ಮೀ.ಯಿಂದ 52 ಕ್ಯೂಸೆಕ್ ನೀರನ್ನು 18.70 ಮೀ. ಎತ್ತರಕ್ಕೆ ಎತ್ತಿ 16 ಹಳ್ಳಿಗಳನ್ನೊಳಗೊಂಡಂತೆ 3735 ಎಕರೆಗೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯಿಂದ ಹಾಸನದ ಸತ್ಯಮಂಗಲ ಹಾಗು ಚನ್ನಪಟ್ಟಣ ಕೆರೆಗೆ ನೀರು ಹರಿಸಲು ನಿರ್ಧರಿಸಲಾಗಿದೆ.

- ಪೂರ್ಣ ಪ್ರಮಾಣದಲ್ಲಿ ಹರಿಯದ ನೀರು
- ಬರಗಾಲದಿಂದ ಕಂಗೆಟ್ಟ ಅನ್ನದಾತರು



### ಹೆಚ್ಚುವರಿ 70 ಕೋ.ರೂ. ಬೇಕು

ನಮ್ಮ ತಂದೆ ಶಾಸಕರಾಗಿದ್ದ ಅವಧಿಯಲ್ಲಿ ಯೋಜನೆ ಕೈಗೆತ್ತಿಕೊಂಡರು. 2019ರ ಬಳಿಕ ಕಾಲುವೆ ಕಾಮಗಾರಿ ಸಂಪೂರ್ಣ ನಿಂತಿದೆ. ಸದ್ಯದ ಕ್ರಿಯಾ ಯೋಜನೆ ಪ್ರಕಾರ 70 ಕೋ.ರೂ. ಅನುದಾನ ಬೇಕು. 2000 ಕೆ.ವಿ. ಸಾಮರ್ಥ್ಯದ ವಿದ್ಯುತ್ ಪರಿವರ್ತಕ ಅಳವಡಿಸಬೇಕು, ವಿದ್ಯುತ್ ಬಿಲ್ ಪಾವತಿ ಸಬೇಕಿದೆ. ಈ ವರ್ಷ ನೀರಿಗೆ ಅಭಾವ ಎದುರಾದ್ದರಿಂದ ರೈತರು ಯೋಜನೆ ಪೂರ್ಣಗೊಳಿಸಲು ರೈತರು ಆಗ್ರಹಿಸುತ್ತಿದ್ದಾರೆ. ಈ ಸಂಬಂಧ ನಾನು ಸರ್ಕಾರಕ್ಕೆ ಹಲವು ಬಾರಿ ಪತ್ರ ಬರೆದಿದ್ದೇನೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

**ಹೆಚ್.ಎಸ್.ಪ್ರಕಾಶ್ ಕನಸು**

ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ ದಿ. ಮಾಜಿ ಶಾಸಕ ಹೆಚ್.ಎಸ್. ಪ್ರಕಾಶ್ ಅವರ ಕನಸಿನ ಯೋಜನೆ. 2006-07ರ ಸಾಲಿನಲ್ಲಿ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರದಿಂದ ಅನುಮೋದನೆ ಪಡೆದಿದ್ದ ಅವರು 2013ರ ವೇಳೆಗೆ ಎರಡು ಹಂತದ ಕಾಮಗಾರಿ ಪೂರ್ಣಗೊಳಿಸಿದ್ದರು. ಯೋಜನೆಯಡಿ ಕ್ಯಾತನಹಳ್ಳಿ, ಭಂಡಿಹಳ್ಳಿ, ದಸೂರು, ಗುಂಡಶೆಟ್ಟಿಹಳ್ಳಿ, ಛತ್ರನಹಳ್ಳಿ, ಹಾಲ್ತೊರೆ, ಗೌಡಿಗೆರೆ, ದೊಡ್ಡಗದ್ದವಳ್ಳಿ, ಚಿಕ್ಕಗದ್ದವಳ್ಳಿ, ಹೆಗ್ಗಡಿಹಳ್ಳಿ, ತಿಮ್ಮನಹಳ್ಳಿ, ಸಿದ್ದಾಪುರ ಹಾಗು ಉಗನೆ ಗ್ರಾಮಗಳಿಗೆ ಸಮರ್ಪಕ ನೀರೊದಗಿಸುವ ಯೋಜನೆ ಇದಾಗಿದೆ. ಮೊದಲ ಹಾಗು ಎರಡನೇ ಹಂತದ ಯೋಜನೆಯಡಿ 2 ಸಾವಿರ ಎಕರೆ ಪ್ರದೇಶಕ್ಕೆ ನೀರು ಹರಿಸ ಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರಾದರೂ ಅದು ಪ್ರಯೋಗಾರ್ಥ ಚಾಲನೆ ಮಾತ್ರ ಆಗಿದೆ. ಲಕ್ಷ್ಮೀಪುರದಲ್ಲಿ ಚೆಕ್ ಡ್ಯಾಂ ನಿರ್ಮಿಸಿ ನೀರು ಹರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಮುಂದುವರಿದು ಕ್ಯಾತನಹಳ್ಳಿ ವ್ಯಾಪ್ತಿಯಲ್ಲಿ ನಾಲೆ, ಚೆಕ್ ಡ್ಯಾಂ ಕೆಲಸ ಮಂದ ಗತಿಯಲ್ಲಿ ಸಾಗುತ್ತಿದೆ.

**ಸಚಿವರ ಭೇಟಿಯಾದರೂ ಬದಲಾಗಿಲ್ಲ**

ಮಳೆಗಾಲದಲ್ಲಿ ನಿರೀಕ್ಷಿತ ಮಳೆಯಾಗಿ ಕೆರೆಕಟ್ಟೆಗಳು ಭರ್ತಿಯಾಗುತ್ತಿದ್ದರಿಂದ ಅಚ್ಚುಕಟ್ಟಿನ ರೈತರು ಯೋಜನೆ ಕುರಿತು ಗಮನ ಹರಿಸಿರಲಿಲ್ಲ. ಆದರೆ ಈ ವರ್ಷ ಮಳೆ ಕೈಕೊಟ್ಟ ಹಿನ್ನಲೆಯಲ್ಲಿ ಮುಂಗಾರು ಬೆಳೆ ಅಸಾಧ್ಯವಾಗಿದೆ. ಈ ಹಿನ್ನಲೆಯಲ್ಲಿ ಭಾಗದ ರೈತರು ಕಾಲುವೆ ಮೂಲಕ ನೀರು ಹರಿಸುವಂತೆ ಒತ್ತಾಯಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಶೀಘ್ರ ನೀರು ಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು. ಮೊದಲ ಎರಡು ಹಂತದ ಕೆಲಸ ಪೂರ್ಣಗೊಂಡಿರುವುದರಿಂದ ನೀರು ಹರಿಸಬಹುದು. ಆದರೆ ಉದ್ದೇಶಿತ ಕೆರೆಗಳಿಗೆ ನೀರು ತಲುಪಬೇಕೆಂದರೆ ಹೆಚ್ಚುವರಿ ಅನುದಾನ ಬಿಡುಗಡೆ ಆಗಲೇಬೇಕಿದೆ. ಈ ನಿಟ್ಟಿನಲ್ಲಿ ಸಚಿವರು ಗಮನ ಹರಿಸಬೇಕೆಂಬ ಆಗ್ರಹ ಕೇಳಿಬಂದಿದೆ.

# ಡಾ|| ಹೆಬ್ಬಾರ್ ಅವರಿಂದ ಇತಿಹಾಸ ಸ್ಮರಿಸುವ ಕೆಲಸಗಳಾಗಿವೆ

• ಪ್ರಜೋದಯ ವರದಿ

**ಹಾಸನ:** ಬಡವರಿಗೆ ಉಚಿತ ಚಿಕಿತ್ಸೆ, ದೀನ ದುರ್ಬಲರಿಗೆ ನೆರವಾಗುವ ಮೂಲಕ ದಿ. ಡಾ|| ಗುರುರಾಜ್ ಹೆಬ್ಬಾರ್ ಅವರು ಇತಿಹಾಸ ಎಂದೆಂದಿಗೂ ನೆನಪಿಡುವಂತಹ ಕೆಲಸಗಳನ್ನು ಮಾಡಿದ್ದಾರೆಂದು ಹಿಮ್ಸ್ ನಿರ್ದೇಶಕ ಡಾ|| ರಾಜಣ್ಣ ಅವರು ಹೇಳಿದರು.

ನಗರದ ಹಾಸನಾಂಬ ಧರ್ಮಛತ್ರ ಸಮಿತಿ ಮತ್ತು ಹಿಮ್ಸ್ ವತಿಯಿಂದ ಧರ್ಮಛತ್ರ ಕಟ್ಟಡದ 2ನೇ ಮಹಡಿಯಲ್ಲಿ ಗುರುವಾರ ನಡೆದ ರಾಜ್ಯೋತ್ಸವ ಪುರಸ್ಕೃತ ದಿ. ಡಾ|| ಗುರುರಾಜ ಹೆಬ್ಬಾರ್ ಅವರ 4ನೇ ಪುಣ್ಯ ಸ್ಮರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಹೃದಯ, ಸಜ್ಜನರಾಗಿದ್ದ ಡಾ|| ಹೆಬ್ಬಾರ್ ವೈದ್ಯರಾಗಿ ವೈದ್ಯೋ ನಾರಾಯಣ ಹರಿಃ ಎಂಬ ಮಾತಿಗೆ ಅನ್ವರ್ಥವಾಗಿ ಬದುಕಿದ್ದರು. ನಮ್ಮ ಆಸ್ಪತ್ರೆಗೆ ಬರುವ ಬಡ ರೋಗಿಗಳ ಆರೈಕೆದಾರರಿಗಾಗಿ ಧರ್ಮಛತ್ರ ಕಟ್ಟಿದರು. ಅದರಿಂದ ಸಾವಿರಾರು ಜನರಿಗೆ ಉಪಯೋಗವಾಗುತ್ತಿದೆ. ರೋಗಿಗಳ ಕಡೆಯವರು ಉಳಿಯಲು ವಸತಿ, ಸ್ನಾನ ಗೃಹ ಮತ್ತು ಅವರ

» ನಾಲ್ಕನೇ ಪುಟದಲ್ಲಿ



# ಬಸ್‌ನಲ್ಲೇ ಕುಸಿದು ಬಿದ್ದ ವ್ಯಕ್ತಿ: ಸಮಯ ಪ್ರಜ್ಞೆ ಮೆರೆದ ಚಾಲಕ

• ಪ್ರಜೋದಯ ವರದಿ

**ಹಾಸನ:** ಮಂಗಳೂರಿನಿಂದ ನಗರಕ್ಕೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಹೃದಯಾಘಾತದಿಂದ ಕುಸಿದು ಬಿದ್ದ ಪ್ರಯಾಣಿಕನನ್ನು ಚಾಲಕ ಮತ್ತು ನಿರ್ವಾಹಕ ತಡ ಮಾಡದೆ ಆಸ್ಪತ್ರೆಗೆ ಕರೆತಂದಿದ್ದು, ವ್ಯಕ್ತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಗುರುವಾರ ಮಧ್ಯಾಹ್ನ 12ರ ವೇಳೆಗೆ ಬಸ್ ನಗರ ಪ್ರವೇಶಿಸುತ್ತಿದ್ದಂತೆ ವ್ಯಕ್ತಿಯೊಬ್ಬರು ಸೀಟ್ ಮೇಲೆ ಕುಸಿದಿದಿದ್ದಾರೆ. ಅದನ್ನು ಕಂಡ ನಿರ್ವಾಹಕ ಚಾಲಕನಿಗೆ ಮಾಹಿತಿ ನೀಡಿದರು. ಸಿಂಹಾಸನಪುರಿ ಆಟೋ ರಿಕ್ಷಾ ಸಂಘದ ಉಪಾಧ್ಯಕ್ಷ ಆನಂದ್ ಹಾಗು ಇತರರು ಬಸ್ ಹೋಗಲು ದಾರಿ ಮಾಡಿಕೊಟ್ಟರು ಮಾತ್ರವಲ್ಲದೆ ಆಸ್ಪತ್ರೆ ವರೆಗೆ ಜೊತೆಗೆ ಬಂದು ತುರ್ತು ಚಿಕಿತ್ಸೆಗೆ ನೆರವಾಗಿದ್ದಾರೆ.

ಚಾಲಕ ಮತ್ತು ನಿರ್ವಾಹಕರ ಸಮಯ ಪ್ರಜ್ಞೆ, ಆಟೋ ಚಾಲಕರ ಮಾನವೀಯ ನೆರವು ಹಾಗು ಆಸ್ಪತ್ರೆ ಸಿಬ್ಬಂದಿಯ ತ್ವರಿತ ಸ್ಪಂದನೆಯಿಂದ ವ್ಯಕ್ತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ.





# ಅಪಘಾತ ವಿಮೆಗಾಗಿ ಸುಳ್ಳು ಮಾಹಿತಿ: ಎಫ್‌ಐಆರ್

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಅಪಘಾತ ವಿಮೆಗಾಗಿ ಅಪಘಾತಕ್ಕೀಡಾದ ಬೈಕ್ ಬದಲಿಗೆ ಬೇರೆ ಬೈಕ್ ತೋರಿಸಿ ಪ್ರಕರಣ ದಾಖಲಿಸಿದ್ದ ಆರೋಪದಡಿ ಆರು ಜನರ ವಿರುದ್ಧ ವಿಮಾ ಕಂಪನಿ ಎಫ್‌ಐಆರ್ ದಾಖಲಿಸಿದೆ.

ಬೆಂಗಳೂರಿನ ವಿಮಾ ಕಂಪನಿಯ ನಿಖಿಲ್ ಎಂಬುವವರು ಬಾಗೂರಿನ ಶರತ್, ರಮೇಶ್, ಬಿ.ಆರ್. ದೇವರಾಜು, ರಾಮೇಗೌಡ, ಪ್ರೇಮ ಹಾಗು ಸಂಜೀವ್ ಕುಮಾರ್ ಎಂಬುವವರ ವಿರುದ್ಧ ದೂರು ನೀಡಿದ್ದಾರೆ.

**ಘಟನೆ ಹಿನ್ನಲೆ :** 2023ರಲ್ಲಿ ಸುಮಂತ್ ಎಂಬಾತ ಕೆಎ 13 ಡಬ್ಲ್ಯು 9543 ನಂಬರ್ ಬೈಕ್‌ನಲ್ಲಿ ಸಂಬಂಧಿ ಶರತ್ ಅವರನ್ನು ಕೂರಿಸಿಕೊಂಡು ಬಾಗೂರು ಹೋಬಳಿ ಬಿದರೆ-ಕರಿಮಾನರಹಳ್ಳಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಕೆಎ 44 ವೈ 0730 ನಂಬರ್‌ನ ಬೈಕ್ ಡಿಕ್ಕಿಯಾಗಿ ಅವಘಡ ಸಂಭವಿಸಿದೆ ಎಂದು ದೂರು ನೀಡಿದ್ದರು. ಕೆಎ 13 ಡಬ್ಲ್ಯು 9543 ನಂಬರ್‌ನ ಬೈಕ್ ಅಪಘಾತವಾಗಿದ್ದು, 50 ಲ.ರೂ. ಪರಿಹಾರಕ್ಕಾಗಿ ನ್ಯಾಯಾ ಲಯದ ಮೆಟ್ಟಿಲೇರಿದ್ದರು.

ಆದರೆ, ಅಪಘಾತ ಮಾಡಿದ ಬೈಕ್ ಸಂಖ್ಯೆ ಕೆಎ 13 ಆರ್ 6289 ಆಗಿದೆ. ಅಪಘಾತ ಸ್ಥಳದಲ್ಲಿದ್ದ ಬೈಕ್ ಅನ್ನು ಮುಚ್ಚಿಟ್ಟು ನಮ್ಮ ಕಂಪನಿಯಲ್ಲಿ ವಿಮೆಗೆ ಒಳಪಟ್ಟ ಬಿ.ಆರ್.ದೇವರಾಜು ಅವರ ಹೆಸರಿನಲ್ಲಿ ನೋಂದಣಿಯಾಗಿರುವ ಬೈಕ್ ತೋರಿಸಿ ಸುಳ್ಳು ಮಾಹಿತಿ ನೀಡಿದ್ದಾರೆ. ಕಂಪನಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ವಂಚಿಸಲು ವಾಹನ ಚಾಲನೆ ಮಾಡದಿದ್ದರೂ ಸುಳ್ಳು ಮಾಹಿತಿ ನೀಡಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಎಫ್‌ಐಆರ್ ದಾಖಲಿಸಲಾಗಿದೆ.

## 2.29 ಲಕ್ಷ ಹೆಕ್ಟೇರ್ ಬಾಧಿತ ಪ್ರದೇಶ | ಅರಸೀಕೆರೆ, ಚನ್ನರಾಯಪಟ್ಟಣದಲ್ಲಿ ಹೆಚ್ಚು

# 5 ತಾಲ್ಲೂಕಿಗೆ 321 ಕೋ.ರೂ. ಬರ ಪರಿಹಾರಕ್ಕೆ ಶಿಫಾರಸ್ಸು

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ :** ಮುಂಗಾರು ಕೈಕೊಟ್ಟ ಪರಿಣಾಮ ಜಿಲ್ಲೆಯ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗಿದ್ದು, ಜಿಲ್ಲೆಯ ಐದು ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳ ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ. ಬರದಿಂದ ಬಾಧಿತವಾಗಿರುವ 2,29,662.41 ಹೆಕ್ಟೇರ್ ಪ್ರದೇಶಕ್ಕೆ 321.65 ಕೋ.ರೂ. ಪರಿಹಾರ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಜಿಲ್ಲೆಯ ಅರಕಲಗೂಡು, ಅರಸೀಕೆರೆ, ಚನ್ನರಾಯಪಟ್ಟಣ, ಹಾಸನ ಹಾಗು ಹೊಳೆನರಸೀಪುರ ತಾಲ್ಲೂಕುಗಳು ಬರ ಪೀಡಿತ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಈ ತಾಲ್ಲೂಕುಗಳಲ್ಲಿನ ಕೃಷಿ ಪ್ರದೇಶದ ಸಮೀಕ್ಷೆ ನಡೆಸಿ, ಬೆಳೆ ಹಾನಿ ಹಾಗು ಬರ ಪರಿಸ್ಥಿತಿಯ ಆಧಾರದ ಮೇಲೆ ಪರಿಹಾರದ ಮೊತ್ತವನ್ನು ಅಂದಾಜಿಸಲಾಗಿದೆ.

**ಅರಸೀಕೆರೆ ತಾಲ್ಲೂಕಿನಲ್ಲಿ ಹೆಚ್ಚು**

ಅರಸೀಕೆರೆ ತಾಲ್ಲೂಕಿನಲ್ಲಿ ಅತೀ ಹೆಚ್ಚು 74,302.44 ಹೆಕ್ಟೇರ್ ಪ್ರದೇಶ ಬರದಿಂದ ಬಾಧಿತವಾಗಿದೆ. ಇಲ್ಲಿಗೆ 109.02 ಕೋ.ರೂ. ಪರಿಹಾರ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಚನ್ನರಾಯಪಟ್ಟಣ ತಾಲ್ಲೂಕಿನ 55,219.36 ಹೆಕ್ಟೇರ್ ಪ್ರದೇಶಕ್ಕೆ 101.36 ಕೋ.ರೂ., ಹಾಸನ ತಾಲ್ಲೂಕಿನ 42,750.61 ಹೆಕ್ಟೇರ್ ಪ್ರದೇಶಕ್ಕೆ 43.38 ಕೋ.ರೂ. ಪರಿಹಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಅರಕಲಗೂಡು ತಾಲ್ಲೂಕಿನ 33,851 ಹೆಕ್ಟೇರ್ ಪ್ರದೇಶಕ್ಕೆ 36.91 ಕೋ.ರೂ., ಹೊಳೆನರಸೀಪುರ ತಾಲ್ಲೂಕಿನ 23,539 ಹೆಕ್ಟೇರ್ ಪ್ರದೇಶಕ್ಕೆ 30.98 ಕೋ.ರೂ. ಪರಿಹಾರದ ಅಗತ್ಯವಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

**2.10 ಲಕ್ಷ ರೈತರಿಗೆ ಬೆಳೆ ವಿಮೆ**

ಬರದ ಪರಿಣಾಮ ರೈತರಿಗೆ ಆಗಬಹುದಾದ ನಷ್ಟವನ್ನು ತಗ್ಗಿಸುವ ಉದ್ದೇಶದಿಂದ ಜಿಲ್ಲೆಯಲ್ಲಿ ಸುಮಾರು 2.10 ಲಕ್ಷ ರೈತರಿಗೆ ಬೆಳೆ ವಿಮೆ ಮಾಡಿಸಲಾಗಿದೆ. ಹೀಗಾಗಿ ಬಿತ್ತನೆ ಮಾಡದೆ ಹಾಗೆ ಬಿಟ್ಟಿರುವ ಪ್ರದೇಶಕ್ಕೆ ತಕ್ಷಣ ಶೇ.15ರಷ್ಟು ತಕ್ಷಣ ಪರಿಹಾರ ನೀಡುವುದಾಗಿ ಘೋಷಣೆ ಮಾಡಲಾಗಿದೆ. ಯಾವಾಗ ಪರಿಹಾರ ದೊರೆಯಲಿದೆ ಎಂದು ರೈತರು ಕಾಯುವಂತಾಗಿದೆ. ಮತ್ತೊಂದೆಡೆ, ಬಿತ್ತನೆ ಮಾಡಿರುವ ರೈತರ ಬೆಳೆಗಳಿಗೆ ಮಳೆ ಕೊರತೆಯಿಂದ ಹಾನಿಯಾಗಿರುವುದರಿಂದ ಪರಿಹಾರದ ನಿರೀಕ್ಷೆಯೂ ಹೆಚ್ಚಿದೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ವಿಮಾ ಕಂಪನಿಗಳು ರೈತರ ನೆರವಿಗೆ ಧಾವಿಸಬೇಕೆಂದು ರೈತರು ಆಗ್ರಹಿಸಿದ್ದಾರೆ.

**ಕೃಷಿ ಚಟುವಟಿಕೆಗೆ ಹೊಡೆತ**

ಮುಂಗಾರು ಅವಧಿಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಹಿನ್ನಲೆ ಬಿತ್ತನೆ ಕಾರ್ಯ, ಬೆಳೆಗಳ ಬೆಳವಣಿಗೆ ಹಾಗು ಇಳುವರಿ ಮೇಲೆ ಪರಿಣಾಮ ಬೀರಿದೆ. ಮಳೆ ಕೊರತೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಬೆಳೆ ಹಾನಿಯ ಜೊತೆಗೆ ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿನ ಸಮಸ್ಯೆಯ ಆತಂಕ ಎದುರಾಗಿದೆ.

» ನಾಲ್ಕನೇ ಪುಟದಲ್ಲಿ



> ಜಿಲ್ಲೆಯಲ್ಲಿ ಐದು ತಾಲ್ಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರಿಸಲಾ ಗಿದೆ. ಈ ಬಗ್ಗೆ ಸಮೀಕ್ಷೆ ನಡೆಸಿ, 2,29,662.41 ಹೆಕ್ಟೇರ್ ಪ್ರದೇಶದಲ್ಲಿ ಬರಕ್ಕೆ ತುತ್ತಾಗಿರುವುದನ್ನು ಗಮನಿಸಿ ಸರ್ಕಾರಕ್ಕೆ 321 ಕೋಟಿರೂ. ಬರ ಪರಿಹಾರಕ್ಕಾಗಿ ಶಿಫಾರಸ್ಸು ಮಾಡಲಾಗಿದೆ.
>
> -ರಮೇಶ್ ಕುಮಾರ್, ಜಂಟಿ ಕೃಷಿ ನಿರ್ದೇಶಕರು

**ತಾಲ್ಲೂಕುವಾರು ಸಲ್ಲಿಸಿರುವ ಅಂದಾಜು ಪಟ್ಟಿ**

| ತಾಲ್ಲೂಕು | ಬಾಧಿತ ಪ್ರದೇಶ (ಹೆಕ್ಟೇರ್) | ಶಿಫಾರಸ್ಸು ಪರಿಹಾರ |
|---|---|---|
| ಅರಕಲಗೂಡು | 33,851 | 36.91 ಕೋ.ರೂ. |
| ಅರಸೀಕೆರೆ | 74,302.44 | 109.02 ಕೋ.ರೂ. |
| ಚನ್ನರಾಯಪಟ್ಟಣ | 55,219.36 | 101.36 ಕೋ.ರೂ. |
| ಹಾಸನ | 42,750.61 | 43.38 ಕೋ.ರೂ. |
| ಹೊಳೆನರಸೀಪುರ | 23,539 | 30.98 ಕೋ.ರೂ. |
| ಒಟ್ಟು | 2,29,662.41 | 321.65 ಕೋ.ರೂ. |

# ಸಾರಿಗೆ ಬಸ್-ಬೊಲೆರೋ ಪಿಕಪ್ ಡಿಕ್ಕಿ: ವ್ಯಕ್ತಿ ಸಾವು

• ಪ್ರಜೋದಯ ವರದಿ

**ಸಕಲೇಶಪುರ:** ಕೆಎಸ್‌ಆರ್‌ಟಿಸಿ ಬಸ್ ಹಾಗು ಬೊಲೆರೋ ಪಿಕಪ್ ವಾಹನದ ನಡುವೆ ಮುಖಾಮುಖಿ ಡಿಕ್ಕಿಯಾಗಿ ಓರ್ವ ಸ್ಥಳದಲ್ಲೇ ಮೃತಪಟ್ಟು, ನಾಲ್ವರು ಗಂಭೀರ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಮಾರನಹಳ್ಳಿ ಸಮೀಪ ಗುರುವಾರ ನಡೆದಿದೆ.

ಮೃತರನ್ನು ದಿನೇಶ್ (38) ಎಂದು ಗುರುತಿಸಲಾಗಿದ್ದು, ಸುಬ್ರಹ್ಮಣ್ಯ, ವೆಂಕಟರಮಣ, ಜಿತೇಂದ್ರ, ಹಾಗು ದುರ್ಗಾಪ್ರಸಾದ್ ಗಾಯಗೊಂಡಿದ್ದಾರೆ. ಪಟ್ಟಣದ ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಗೆ ಗಾಯಾಗಳುಗಳನ್ನು ದಾಖಲಿಸಲಾಗಿದೆ.

ಐಸಿಐಸಿಐ ಬ್ಯಾಂಕ್‌ಗೆ ಸೇರಿದ ಬೊಲೆರೋ ಪಿಕಪ್ ವಾಹನವು ಎಟಿಎಂಗಳಿಗೆ ಹಣ ತುಂಬಲು ತೆರಳುತ್ತಿತ್ತು. ಪಿಕಪ್ ಹಾಗು ಮಂಗಳೂರಿನಿಂದ ಬೆಂಗಳೂರಿನತ್ತ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ನಡುವೆ ಅಪಘಾತ ಸಂಭವಿಸಿದೆ. ಗಾಯಾಳುಗಳು ಕೊಡಗು ಹಾಗು ಮಂಗಳೂರು ಮೂಲದವರು ಎಂದು ತಿಳಿದು ಬಂದಿದೆ. ಅಪಘಾತದ ತೀವ್ರತೆಗೆ ಪಿಕಪ್ ವಾಹನದ ಮುಂಭಾಗ ಸಂಪೂರ್ಣ ಜಖಂಗೊಂಡಿದ್ದು, ಸ್ಥಳೀಯರು ಹಾಗು ವಾಹನ ಸವಾರರು ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲು ನೆರವಾದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



# ಸಿನಿ ಪ್ರಜಾ



# ಬೃಂದಾವಿಹಾರಿ ರಿಲೀಸ್ ಡೇಟ್ ಅನೌನ್ಸ್



## 1,300 ಸ್ಕ್ರೀನ್‌ನಲ್ಲಿ ರಿಲೀಸ್

ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ ಬೃಂದಾವಿಹಾರಿ ಚಿತ್ರದ ರಿಲೀಸ್ ಡೇಟ್ ಅನೌನ್ಸ್ ಆಗಿದೆ. ದಸರಾ ಹಬ್ಬದ ಸಮಯದಲ್ಲಿಯೇ ಈ ಚಿತ್ರ ತೆರೆ ಕಾಣುತ್ತಿದೆ. ಜೈಲರ್-2 ಚಿತ್ರದ ಸಮಯದಲ್ಲಿಯೇ ಈ ಸಿನಿಮಾ ಬರ್ತಿದೆ.

ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ ಬೃಂದಾವಿಹಾರಿ ಚಿತ್ರದ ರಿಲೀಸ್ ಡೇಟ್ ಅನೌನ್ಸ್ ಆಗಿದೆ. ಈ ಚಿತ್ರ ದಸರಾ ಹಬ್ಬದ ಸಂದರ್ಭದಲ್ಲಿಯೇ ರಿಲೀಸ್ ಆಗುತ್ತಿದೆ. ಹಾಗಾಗಿಯೇ ಈ ಸಡಗರದಲ್ಲಿ ಗಣೇಶ್ ಹಬ್ಬ ಅನ್ನು ಹಾಗೆ ಈ ಚಿತ್ರ ಬರ್ತಿದೆ. ಡೈರೆಕ್ಟರ್ ಶ್ರೀನಿವಾಸ ರಾಜು ಈ ಸಿನಿಮಾ ಡೈರೆಕ್ಷನ್ ಮಾಡಿದ್ದಾರೆ. ಕೃಷ್ಣಂ ಪ್ರಣಯ ಸಖಿ ಚಿತ್ರ ಆದ್ಮೇಲೆ ಗಣೇಶ್ ಮತ್ತು ಶ್ರೀನಿವಾಸ್ ರಾಜು ಈ ಬೃಂದಾವಿಹಾರಿ ಚಿತ್ರ ಮಾಡಿದ್ದಾರೆ.

**ಅಕ್ಟೋಬರ್-16 ರಂದು ರಿಲೀಸ್**

ಬೃಂದಾವಿಹಾರಿ ಚಿತ್ರದ ರಿಲೀಸ್ ಡೇಟ್ ಫಿಕ್ಸ್ ಆಗಿದೆ. ಮುಂದಿನ ತಿಂಗಳು ಅಂದ್ರೆ, ಅಕ್ಟೋಬರ್-16 ರಂದು ಈ ಚಿತ್ರ ತೆರೆ ಕಾಣುತ್ತಿದೆ. ಟಾಕ್ಕಿಕ್ ಚಿತ್ರ ನಿರ್ಮಿಸಿದ ಕೆವಿಎನ್ ಸಂಸ್ಥೆ ಈ ಸಿನಿಮಾವನ್ನ ವಿತರಣೆ ಮಾಡುತ್ತಿದೆ.

1,300 ಪರದೆಗಳಲ್ಲಿ ಈ ಚಿತ್ರ ರಿಲೀಸ್ ಮಾಡುವ ಪ್ಲಾನ್ ಕೂಡ ಇದೆ. ಆದರೆ, ಈ ಚಿತ್ರ ಬರೋ ಸಮಯದಲ್ಲಿ ಸೂಪರ್ ಸ್ಟಾರ್ ರಜನಿಕಾಂತ್ ಅವರ ಜೈಲರ್-2 ಚಿತ್ರವೂ ಬರ್ತಿದೆ. ಈ ರಿಸ್ಕ್ ಯಾಕೆ ಅನ್ನುವ ಪ್ರಶ್ನೆಗಳನ್ನು ಕೆಲವು ನಿರ್ಮಾಪಕರು ಮಾಡಿದ್ದಾರೆ.

**ನಿರ್ಮಾಪಕರು ಹೇಳಿದ್ದೇನು**

ಚಿತ್ರದ ನಿರ್ಮಾಪಕ ಸಮೃದ್ಧಿ ವಿ ಮಂಜುನಾಥ್ ಈ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ. ಇದು ನನ್ನ ಕನ್ನಡ ಸಿನಿಮಾ. ಗೆದ್ದೇ ಗೆಲ್ಲುತ್ತದೆ ಎಂಬ ಭರವಸೆ ಇದೆ. ಆ ನಂಬಿಕೆ ಮೇಲೆ ಜಗತ್ತಿನಾದ್ಯಂತ 1,300 ಪರದೆಯಲ್ಲಿ ಚಿತ್ರ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ ಅಂತಲೇ ಹೇಳಿದ್ದಾರೆ.

ಬೃಂದಾವಿಹಾರಿ ಸಿನಿಮಾವನ್ನ ಮೈಸೂರು ಮತ್ತು ಸುತ್ತಮುತ್ತ ಚಿತ್ರೀಕರಣ ಮಾಡಿದ್ದಾರೆ. ಮೊದಲ ಹಂತದ ಚಿತ್ರೀಕರಣ 56 ದಿನ ಮಾಡಿದ್ದಾರೆ. ಈ ಸಿನಿಮಾದಲ್ಲಿ ಇಬ್ಬರು ನಾಯಕಿಯರಿದ್ದಾರೆ. ಮಾಳವಿಕಾ ಶರ್ಮಾ ಹಾಗೂ ದೇವಿಕಾ ಭಟ್ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಗಣೇಶ್‌ಗೆ ಜೋಡಿ ಆಗಿದ್ದಾರೆ.

**ಮಾಧವ ಪಾತ್ರದಲ್ಲಿ ಗಣಿ**

ಈ ಚಿತ್ರದಲ್ಲಿ ಗಣೇಶ್ ಪಾತ್ರ ವಿಶೇಷವಾಗಿದೆ. ಮಾಧವ ಅನ್ನುವ ಪಾತ್ರವನ್ನೆ ಗಣೇಶ್ ಇಲ್ಲಿ ಮಾಡಿದ್ದಾರೆ. ಎಮೋಷನಲ್ ಮತ್ತು ಮುಗ್ಧವಾದ ಪಾತ್ರ ಇದಾಗಿದೆ.

**ಗೋಲ್ಡನ್ ಗಣಿ ಹೇಳಿದ್ದೇನು**

ಈ ಸಿನಿಮಾದಲ್ಲಿ ಗಣೇಶ್ ಅದ್ಭುತವಾಗಿ ಅಭಿನಯಿಸಿದ್ದಾರೆ ಅಂತ ಡೈರೆಕ್ಟರ್ ಶ್ರೀನಿವಾಸ್ ರಾಜು ಹೇಳಿದ್ದಾರೆ. ಈ ಚಿತ್ರ ಆದ್ಮೇಲೆ ನಾನು ಗಣೇಶ್ ಜೊತೆಗೆ ಮತ್ತೊಂದು ಚಿತ್ರ ಮಾಡದೇ ಇದ್ದರೂ ಪರವಾಗಿಲ್ಲ. ಕಾರಣ, ಅಷ್ಟೊಂದು ತೃಪ್ತಿಯನ್ನ ಈ ಚಿತ್ರ ಕೊಟ್ಟಿದೆ ಅಂತಲೇ ಹೇಳಿದ್ದಾರೆ.

ಗೋಲ್ಡನ್ ಸ್ಟಾರ್ ಗಣೇಶ್ ಈ ಚಿತ್ರದಲ್ಲಿ ಹಿರಿಯ ನಟಿ ಲಕ್ಷ್ಮಿ ಅವರ ಜೊತೆ ಅಭಿನಯಸಿದ್ದಾರೆ. ಅಶೋಕ್, ರಾಮ್ ಕುಮಾರ್, ರಂಗಾಯಣ ರಘು ಅವರ ಜೊತೆಗೆ ಸ್ಕ್ರೀನ್ ಶೇರ್ ಮಾಡಿಕೊಂಡಿದ್ದಾರೆ.

ಇವರ ಜೊತೆಗೆ ಕೆಲಸ ಮಾಡಿ ತುಂಬಾನೆ ಖುಷಿ ಆಗಿದೆ. ಇವರಿಂದ ತುಂಬಾನೆ ತಿಳಿದುಕೊಂಡಿದ್ದೇನೆ ಅಂತಲೂ ಹೇಳಿದ್ದಾರೆ. ಈ ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಮಾಧವ. ಪ್ರೇಕ್ಷಕರು ನನ್ನಿಂದ ಏನು ಬಯಸುತ್ತಾರೆ ಅದು ಈ ಚಿತ್ರದಲ್ಲಿದೆ. ಮುಗ್ಧತೆ, ಭಾವನೆಗೆ ಬೆಲೆ ಕೊಡುವ ಪಾತ್ರ ನನ್ನದು ಅಂತೂ ಗಣೇಶ್ ಹೇಳಿದ್ದಾರೆ.

**ಸೂಪರ್ ಹಾಡುಗಳು**

ಈ ಚಿತ್ರದಲ್ಲಿ ಒಳ್ಳೆ ಹಾಡುಗಳೇ ಇವೆ. ಈಗಾಗಲೇ ಮೂರು ಹಾಡುಗಳು ರಿಲೀಸ್ ಆಗಿವೆ. ಸಂಗೀತ ನಿರ್ದೇಶಕ ಹೇಶಮ್ ಅಬ್ದುಲ್ ವಹಾಬ್ ಈ ಚಿತ್ರಕ್ಕೆ ಮ್ಯೂಸಿಕ್ ಮಾಡಿದ್ದಾರೆ.

ಈ ಚಿತ್ರದ ಪ್ರಚಾರ ಶುರು ಆಗಿದೆ. ಪ್ರಚಾರ ಸಂಭ್ರಮ ಅಂತ ಚಿತ್ರ ತಂಡ ಕಾರ್ಯಕ್ರಮ ಮಾಡಿದೆ. ಈ ಸಡಗರದಲ್ಲಿಯೇ ಸಿನಿಮಾದ ಮೂರು ಹಾಡುಗಳ ಪ್ರದರ್ಶನ ಕೂಡ ಆಗಿದೆ ಅಂತ ಹೇಳಬಹುದು.



# ಧನುಷ್ ಅಭಿಮಾನಿಗಳಿಗೆ ಗುಡ್ ನ್ಯೂಸ್! ಮಾರಿ 3ಗೆ ಭರ್ಜರಿ ಪ್ಲ್ಯಾನ್?



ಮಾರಿ ಹಾಗೂ ಮಾರಿ 2 ಸಿನಿಮಾಗಳ ಯಶಸ್ಸಿನ ಬಳಿಕ ಇದೀಗ ಈ ಜನಪ್ರಿಯ ಪಾತ್ರ ಮತ್ತೊಮ್ಮೆ ತೆರೆಗೆ ಬರಲು ಸಿದ್ಧವಾಗುತ್ತಿದೆ ಎಂಬ ಸುದ್ದಿ ಕಾಲಿವುಡ್‌ನಲ್ಲಿ ಕುತೂಹಲ ಮೂಡಿಸಿದೆ.

ದಕ್ಷಿಣ ಭಾರತದ ಮಾಸ್ ಸಿನಿಮಾಗಳಲ್ಲಿ ಪ್ರೇಕ್ಷಕರ ಮನಸ್ಸಿನಲ್ಲಿ ವಿಶೇಷ ಸ್ಥಾನ ಪಡೆದಿರುವ ಪಾತ್ರಗಳಲ್ಲಿ ಧನುಷ್ ಅಭಿನಯದ ಮಾರಿ ಕೂಡ ಒಂದು. ವಿಭಿನ್ನ ಸ್ಟೈಲ್, ಹಾಸ್ಯ, ರೌಡಿಸಂ ಹಾಗೂ ಹೀರೋಯಿಸಂನ ಅದ್ಭುತ ಮಿಶ್ರಣವಾಗಿದ್ದ ಈ ಪಾತ್ರ ಧನುಷ್ ವೃತ್ತಿಜೀವನದಲ್ಲೇ ವಿಶೇಷ ಗುರುತನ್ನು ತಂದುಕೊಟ್ಟಿತ್ತು. ಮಾರಿ ಹಾಗೂ ಮಾರಿ 2 ಸಿನಿಮಾಗಳ ಯಶಸ್ಸಿನ ಬಳಿಕ ಇದೀಗ ಈ ಜನಪ್ರಿಯ ಪಾತ್ರ ಮತ್ತೊಮ್ಮೆ ತೆರೆಗೆ ಬರಲು ಸಿದ್ಧವಾಗುತ್ತಿದೆ ಎಂಬ ಸುದ್ದಿ ಕಾಲಿವುಡ್‌ನಲ್ಲಿ ಕುತೂಹಲ ಮೂಡಿಸಿದೆ.

ಧನುಷ್ ಹಾಗೂ ನಿರ್ದೇಶಕ ಬಾಲಾಜಿ ಮೋಹನ್ ಮತ್ತೊಮ್ಮೆ ಮಾರಿ ಫ್ರಾಂಚೈಸಿಗಾಗಿ ಕೈಜೋಡಿಸುವ ಸಾಧ್ಯತೆ ಇದೆ ಎಂಬ ಮಾತುಗಳು ಕೇಳಿಬರುತ್ತಿವೆ. ವರದಿಗಳ ಪ್ರಕಾರ, ಇಬ್ಬರೂ ಈಗಾಗಲೇ ಚಿತ್ರದ ಕಥೆಯ ಕುರಿತು ಚರ್ಚೆ ನಡೆಸಿದ್ದು, ಸಿನಿಮಾದ ಸ್ಕ್ರಿಪ್ಟ್ ಕೆಲಸವೂ ನಡೆಯುತ್ತಿದೆ ಎನ್ನಲಾಗಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಮುಂದಿನ ವರ್ಷ ಮಾರಿ 3 ಸಿನಿಮಾ ಸೆಟ್ಟೇರುವ ಸಾಧ್ಯತೆ ಇದೆ.

ಬಾಲಾಜಿ ಮೋಹನ್ ನಿರ್ದೇಶನದ ಮಾರಿ ಸಿನಿಮಾ 2015ರಲ್ಲಿ ಬಿಡುಗಡೆಯಾಗಿತ್ತು. ಚಿತ್ರದಲ್ಲಿ ಧನುಷ್ ನಾಯಕನಾಗಿ ನಟಿಸಿದ್ದು, ಕಾಜಲ್ ಅಗರ್ವಾಲ್ ನಾಯಕಿಯಾಗಿ ಕಾಣಿಸಿಕೊಂಡಿದ್ದರು. ಮೀಸೆ ಬಿಟ್ಟು, ಬಣ್ಣಬಣ್ಣದ ಶರ್ಟ್ ಧರಿಸಿ, ಏರಿಯಾದಲ್ಲಿ ಕಾಲರ್ ಎತ್ತಿಕೊಂಡು ಓಡಾಡುವ ರೌಡಿ ಪಾತ್ರದಲ್ಲಿ ಧನುಷ್ ಕಾಣಿಸಿಕೊಂಡಿದ್ದರು.

ಮಾರಿ ಪಾತ್ರದಲ್ಲಿ ರೌಡಿಸಂ ಇದ್ದರೂ ಆತನಲ್ಲಿ ಹಾಸ್ಯ ಹಾಗೂ ಮಾನವೀಯ ಗುಣಗಳೂ ಇದ್ದವು. ಪಾತ್ರಕ್ಕೆ ನೀಡಲಾಗಿದ್ದ ಫ್ಲ್ಯಾಷ್‌ಬ್ಯಾಕ್ ಕೂಡ ಕಥೆಗೆ ಪ್ರಮುಖ ತಿರುವು ನೀಡಿತ್ತು. ಧನುಷ್ ಅವರ ವಿಭಿನ್ನ ಮ್ಯಾನರಿಸಂ, ಡೈಲಾಗ್ ಡೆಲಿವರಿ ಹಾಗೂ ಮಾಸ್ ಸ್ಟೈಲ್ ಪ್ರೇಕ್ಷಕರಿಗೆ ಬಹಳ ಇಷ್ಟವಾಗಿತ್ತು. ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿತ್ತು.

ಮಾರಿ 2ನಲ್ಲಿ ಸಾಯಿ ಪಲ್ಲವಿ

ಮೊದಲ ಸಿನಿಮಾದ ಯಶಸ್ಸಿನ ಬಳಿಕ ಮಾರಿ 2 ಸಿನಿಮಾ 2018ರಲ್ಲಿ ಬಿಡುಗಡೆಯಾಯಿತು. ಬಾಲಾಜಿ ಮೋಹನ್ ನಿರ್ದೇಶನ ಮುಂದುವರಿದಿದ್ದು, ಧನುಷ್ ಮತ್ತೊಮ್ಮೆ ಮಾರಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಈ ಬಾರಿ ಸಾಯಿ ಪಲ್ಲವಿ ನಾಯಕಿಯಾಗಿ ನಟಿಸಿದ್ದರು.

ಮಾರಿ 2 ಚಿತ್ರವು ಮೊದಲ ಭಾಗದಷ್ಟು ದೊಡ್ಡ ಮಟ್ಟದ ಯಶಸ್ಸು ಗಳಿಸದಿದ್ದರೂ, ಸಿನಿಮಾದ ಹಲವು ಅಂಶಗಳು ಪ್ರೇಕ್ಷಕರ ಗಮನ ಸೆಳೆದಿದ್ದವು. ಅದರಲ್ಲೂ ಧನುಷ್ ಮತ್ತು ಸಾಯಿ ಪಲ್ಲವಿ ಅಭಿನಯದ ರೌಡಿ ಬೇಬಿ ಹಾಡು ಭಾರೀ ಜನಪ್ರಿಯತೆ ಪಡೆದುಕೊಂಡಿತ್ತು. ಹಾಡಿನ ನೃತ್ಯ ಹಾಗೂ ಸಂಗೀತಕ್ಕೆ ಪ್ರೇಕ್ಷಕರು ಫಿದಾ ಆಗಿದ್ದರು.

ಧನುಷ್ ಇತ್ತೀಚಿನ ವರ್ಷಗಳಲ್ಲಿ ವಿಭಿನ್ನ ಕಥಾಹಂದರ ಹಾಗೂ ಪ್ರಯೋಗಾತ್ಮಕ ಪಾತ್ರಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಪೂರ್ಣ ಮಾಸ್ ಮತ್ತು ಕಮರ್ಷಿಯಲ್ ಸಿನಿಮಾದಲ್ಲಿ ಅವರನ್ನು ನೋಡಲು ಅಭಿಮಾನಿಗಳು ಕಾತರರಾಗಿದ್ದಾರೆ. ಇದೀಗ ಮಾರಿ 3 ಮೂಲಕ ಧನುಷ್ ಮತ್ತೆ ತಮ್ಮ ಹಳೆಯ ಮಾಸ್ ಅವತಾರಕ್ಕೆ ಮರಳುವ ಸಾಧ್ಯತೆ ಇದೆ.

ವರದಿಗಳ ಪ್ರಕಾರ, ಧನುಷ್ ಸ್ವತಃ ನಿರ್ದೇಶಕ ಬಾಲಾಜಿ ಮೋಹನ್ ಅವರಿಗೆ ಕಥೆಯೊಂದನ್ನು ಸೂಚಿಸಿದ್ದು, ಅದನ್ನು ಮತ್ತಷ್ಟು ಅಭಿವೃದ್ಧಿಪಡಿಸುವಂತೆ ಕೇಳಿಕೊಂಡಿದ್ದಾರೆ ಎನ್ನಲಾಗಿದೆ. ಸದ್ಯ ಚಿತ್ರದ ಕಥೆ ಮತ್ತು ಸ್ಕ್ರಿಪ್ಟ್ ಕೆಲಸ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ. ಈ ಸುದ್ದಿ ನಿಜವಾದರೆ, ಸುಮಾರು ಎಂಟು ವರ್ಷಗಳ ಬಳಿಕ ಮಾರಿ ಪಾತ್ರವನ್ನು ಮತ್ತೊಮ್ಮೆ ತೆರೆ ಮೇಲೆ ನೋಡಲು ಅಭಿಮಾನಿಗಳಿಗೆ ಅವಕಾಶ ಸಿಗಲಿದೆ.

ಮಾರಿ ಸಿನಿಮಾದ ಮೊದಲ ಭಾಗಕ್ಕೆ ಅನಿರುದ್ಧ್ ರವಿಚಂದರ್ ಸಂಗೀತ ನೀಡಿದ್ದರು. ಚಿತ್ರದ ಹಾಡುಗಳು ಹಾಗೂ ಹಿನ್ನೆಲೆ ಸಂಗೀತ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿದ್ದವು. ಎರಡನೇ ಭಾಗಕ್ಕೆ ಯುವನ್ ಶಂಕರ್ ರಾಜಾ ಸಂಗೀತ ನಿರ್ದೇಶನ ಮಾಡಿದ್ದರು.

ಇದೀಗ ಮೂರನೇ ಭಾಗಕ್ಕಾಗಿ ಮತ್ತೆ ಅನಿರುದ್ಧ್ ರವಿಚಂದರ್ ಅವರನ್ನೇ ಸಂಗೀತ ನಿರ್ದೇಶಕರನ್ನಾಗಿ ಕರೆತರುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಅನಿರುದ್ಧ್ ಮಾಸ್ ಮ್ಯೂಸಿಕ್ ಹಾಗೂ ಧನುಷ್ ಅವರ ಸ್ಕ್ರೀನ್ ಪ್ರೆಸೆನ್ಸ್ ಮತ್ತೊಮ್ಮೆ ಒಂದಾದರೆ ಮಾರಿ 3ಗೆ ಆರಂಭದಿಂದಲೇ ದೊಡ್ಡ ನಿರೀಕ್ಷೆ ಮೂಡುವ ಸಾಧ್ಯತೆ ಇದೆ.

# ಭರ್ತಿ 9 ವರ್ಷಗಳ ನಂತರ ಕೊನೆಗೂ ದುನಿಯಾ ವಿಜಯ್‌ಗೆ ಡಿವೋರ್ಸ್ ಸಿಕ್ಕಿದ್ದು ಹೇಗೆ?



ಭರ್ತಿ 9 ವರ್ಷಗಳ ನಂತರ ಕೊನೆಗೂ ದುನಿಯಾ ವಿಜಯ್ ಅವರಿಗೆ ಪತ್ನಿಯಿಂದ ಡಿವೋರ್ಸ್ ಸಿಕ್ಕಿದೆ. ಆದರೆ ಇಷ್ಟು ದೀರ್ಘ ನಡೆದ ಕೌಟುಂಬಿಕ ಕಾನೂನು ಹೋರಾಟದಲ್ಲಿ ಕೊನೆಗೂ ಡಿವೋರ್ಸ್ ಸಿಗುವಂತಾಗಿದ್ದು ಹೇಗೆ?

ಖ್ಯಾತ ನಟ ದುನಿಯಾ ವಿಜಯ್ ಅವರ ದಾಂಪತ್ಯ ಜೀವನ ಅಧಿಕೃತವಾಗಿ ಕೊನೆಗೊಂಡಿದೆ. ಮೊದಲ ಪತ್ನಿ ನಾಗರತ್ನ ಅವರಿಂದ ದುನಿಯಾ ವಿಜಯ್ ವಿಚ್ಛೇದನ ಪಡೆದಿದ್ದು ಇಬ್ಬರೂ ಕಾನೂನಾತ್ಮಕವಾಗಿ ಬೇರ್ಪಟ್ಟಿದ್ದಾರೆ.

ಇವರು 1999ರಲ್ಲಿ ಮದುವೆಯಾಗಿದ್ದರು. ಇವರ ಮದುವೆಯಾಗಿ ಭರ್ತಿ 27 ವರ್ಷಗಳಾಗಿವೆ. 2013ರಲ್ಲಿ ದುನಿಯಾ ವಿಜಯ್ ಡಿವೋರ್ಸ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ 2014ರಲ್ಲಿ ಇಬ್ಬರೂ ಮತ್ತೆ ಒಂದಾದರು. ಆ ನಂತರ ದುನಿಯಾ ವಿಜಯ್ ಅವರು 2018ರಲ್ಲಿ ಮತ್ತೆ ಡಿವೋರ್ಸ್‌ಗೆ ಅರ್ಜಿ ಸಲ್ಲಿಸಿದ್ದರು. ಇದು ಮುಂದುವರಿದು ಈಗ ಭರ್ತಿ 9 ವರ್ಷಗಳ ನಂತರ ಇತ್ಯರ್ಥವಾಗಿದ್ದು ಡಿವೋರ್ಸ್ ಫೈನಲ್ ಆಗಿದೆ.

**ಯಾವ ಆಧಾರದಲ್ಲಿ ಡಿವೋರ್ಸ್?**

ಕ್ರೌರ್ಯದ ಆಧಾರದ ಮೇಲೆ ನಟ ದುನಿಯಾ ವಿಜಿ ಹಾಗು ಪತ್ನಿಗೆ ಡೈವೋರ್ಸ್ ಮಂಜೂರು ಮಾಡಲಾಗಿದೆ. ನಟ ದುನಿಯಾ ವಿಜಯ್ ಹಾಗು ಪತ್ನಿ ನಾಗರತ್ನಗೆ ಡಿವೋರ್ಸ್ ಮಂಜೂರು ಮಾಡಿದ ಹೈಕೋರ್ಟ್ ವಿಭಾಗೀಯ ಪೀಠ 2 ಕೋಟಿ ಜೀವನಾಂಶ ನೀಡುವಂತೆಯೂ ಆದೇಶ ನೀಡಿದೆ.

ನ್ಯಾಯಮೂರ್ತಿಗಳಾದ ಡಿಕೆ ಸಿಂಗ್ ಹಾಗು ಶಾಂತಿಭೂಷಣ್‌ರ ವಿಭಾಗೀಯ ಪೀಠದಿಂದ ಆದೇಶ ಹೊರಬಂದಿದೆ. ಮೂರು ತಿಂಗಳ ಒಳಗೆ ಒನ್ ಟೈಂ ಸೆಟ್ಲ್‌ಮೆಂಟ್ ಆಗಿ ನಾಗರತ್ನಗೆ ಜೀವನಾಂಶ ನೀಡುವಂತೆ ಆದೇಶ ನೀಡಲಾಗಿದೆ. ಅಲ್ಲದೆ ಮೂವರು ಮಕ್ಕಳ ಸಂಪೂರ್ಣ ಜವಬ್ದಾರಿ ದುನಿಯಾ ವಿಜಯ್ ಹೊರುವಂತೆ ಆದೇಶದಲ್ಲಿ ತಿಳಿಸಲಾಗಿದೆ. ನಾಗರತ್ನ ಅವರಿಗೆ ಸ್ವಂತ ಮನೆ ಇದ್ದು ಒಂದು ಮನೆ ಬಾಡಿಗೆ ಬಡುತ್ತಿದೆ ಅಂತಾ ವಿಜಯ್ ಪರ ವಕೀಲರು ವಾದಿಸಿದ್ದರು.

ನಾಗರತ್ನರ ಕ್ರೌರ್ಯದಿಂದ ವಿಜಯ್ ನೊಂದಿದ್ದಾರೆ ಅಂತಾ ವಕೀಲ ವಾದಿಸಿದ್ದರು. ಫಾಮಿಲಿ ಕೋರ್ಟ್ ಆದೇಶ ಪ್ರಶ್ನಿಸಿ ಹೈಕೋರ್ಟ್ ಗೆ ಅಪೀಲ್ ಹೋಗಿದ್ದ ವಿಜಯ್ ಅವರಿಗೆ ಈಗ ಡಿವೋರ್ಸ್ ಸಿಕ್ಕಿದೆ. ಇದೀಗ ಹೈಕೋಟ್‌ನಲ್ಲಿ ಡೈವೋರ್ಸ್ ಪಡೆದುಕೊಂಡ ನಟ ದುನಿಯಾ ವಿಜಯ್ ಮೊದಲ ಪತ್ನಿಯಿಂದ ಕಾನೂನಾತ್ಮಕವಾಗಿ ಬೇರ್ಪಟ್ಟಿದ್ದಾರೆ.

ದುನಿಯಾ ವಿಜಯ್ ಪರ ಹಿರಿಯ ವಕೀಲರಾದ ಎಸ್. ಶ್ರೀವತ್ಸ ಮತ್ತು ಯುಕ್ತ ಅನಿಲ್ ವಾದ ಮಂಡಿಸಿದ್ದರು. ದುನಿಯಾ ವಿಜಯ್ ನಾಗರತ್ನ ದಾಂಪತ್ಯ ಅಂತ್ಯವಾಗಿದ್ದು ಪತ್ನಿಗೆ 2 ಕೋಟಿ ಜೀವನಾಂಶ ನೀಡುವಂತೆ ದುನಿಯಾ ವಿಜಯ್‌ಗೆ ಆದೇಶ ನೀಡಲಾಗಿದೆ.

# ಪಿ.ಸಮುದ್ರಖನಿ ನಿರ್ದೇಶನದ ಸ್ಕೂಲ್ ಬಸ್ ಚಿತ್ರ, ಬಹು ಭಾಷೆಗಳಲ್ಲಿ ಸಿನಿಮಾ ರಿಲೀಸ್

ಕಿಚ್ಚ ಸುದೀಪ್ ಅವರು ಖ್ಯಾತ ತಮಿಳು ನಿರ್ದೇಶಕ ಹಾಗೂ ನಟ ಪಿ.ಸಮುದ್ರಖನಿ ಅವರ ಮುಂಬರುವ ಸ್ಕೂಲ್ ಬಸ್ ಚಿತ್ರದಲ್ಲಿ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್ ಅವರು ಖ್ಯಾತ ತಮಿಳು ನಿರ್ದೇಶಕ ಹಾಗೂ ನಟ ಪಿ.ಸಮುದ್ರಖನಿ ಅವರ ಮುಂಬರುವ ಸ್ಕೂಲ್ ಬಸ್ ಚಿತ್ರದಲ್ಲಿ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸೆಪ್ಟೆಂಬರ್ 2ರಂದು ಸುದೀಪ್ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಚಿತ್ರತಂಡ ಮಧ್ಯರಾತ್ರಿ ಅವರ ಫಸ್ಟ್ ಲುಕ್ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಈ ಮಹತ್ವದ ಪ್ರಾಜೆಕ್ಟ್‌ನಲ್ಲಿ ಅವರು ಇರುವುದನ್ನು ಅಧಿಕೃತವಾಗಿ ಪ್ರಕಟಿಸಿದೆ. ಖ್ಯಾತ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಅರ್ಪಿಸುತ್ತಿರುವ ಈ ಚಿತ್ರವು ಭಾರಿ ನಿರೀಕ್ಷೆಯನ್ನು ಹುಟ್ಟುಹಾಕಿದೆ.

ನಾಡೋಡಿಗಳ್, ಅಪ್ಪ ಮತ್ತು ವಿನೋದಯ ಸಿತಂ ಮುಂತಾದ ಸದಭಿರುಚಿಯ ಚಿತ್ರಗಳ ಮೂಲಕ ಜನಪ್ರಿಯರಾಗಿರುವ ಪಿ.ಸಮುದ್ರಖನಿ ಅವರು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುವುದರ ಜೊತೆಗೆ ಪ್ರಮುಖ ಪಾತ್ರದಲ್ಲೂ ಅಭಿನಯಿಸುತ್ತಿದ್ದಾರೆ. 22 ಮಕ್ಕಳ ಜವಾಬ್ದಾರಿ ಹೊತ್ತ ಶಾಲಾ ಬಸ್ ಚಾಲಕನೊಬ್ಬನ ಸುತ್ತ ಈ ಕಥೆ ಸಾಗಲಿದ್ದು, ಮಕ್ಕಳ ಭಾವನೆಗಳು, ಪೋಷಕರ ಕಳಕಳಿ ಹಾಗೂ ಶಿಕ್ಷಕರ ಬದುಕಿನ ವಿವಿಧ ಮಗ್ಗುಲುಗಳ ಮೇಲೆ ಈ ಸಿನಿಮಾ ಬೆಳಕು ಚೆಲ್ಲಲಿದೆ.



ಈ ಹಿಂದೆ ತಮಿಳಿನಲ್ಲಿ ಪುಲಿ ಮತ್ತು ಮುಡಿಂಜ ಇವನ ಪುಡಿ (ಕನ್ನಡದಲ್ಲಿ ಕೋಟಿಗೊಬ್ಬ 2) ಸೇರಿದಂತೆ ಹಲವು ಚಿತ್ರಗಳ ಮೂಲಕ ಗುರುತಿಸಿ ಕೊಂಡಿದ್ದ ಸುದೀಪ್, ಸ್ಕೂಲ್ ಬಸ್ ಪ್ರಾಜೆಕ್ಟ್ ಒಪ್ಪಿಕೊಳ್ಳಲು ಅದರ ಆಕರ್ಷಕ ಕಥಾವಸ್ತುವೇ ಪ್ರಮುಖ ಕಾರಣ ಎನ್ನಲಾಗಿದೆ. ನಿರ್ದೇಶಕ ಸಮುದ್ರಖನಿ ಹೇಳಿದ ವಿಶಿಷ್ಟ ಕಥೆ ಹಾಗೂ ಗ್ಲಿಂಪ್ಸ್ ವೀಕ್ಷಿಸಿದ ಬಳಿಕ, ಸುದೀಪ್ ಈ ಚಿತ್ರದಲ್ಲಿ ನಟಿಸಲು ತಕ್ಷಣವೇ ಗ್ರೀನ್ ಸಿಗ್ನಲ್ ತೋರಿದ್ದಾರೆ ಎಂದು ಚಿತ್ರತಂಡ ಮಾಹಿತಿ ಹಂಚಿಕೊಂಡಿದೆ.

ಲೆನಿನ್ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಡಾ.ಪಿ.ಲೆನಿನ್ ಮುತ್ತುರಾಜ್ ಮತ್ತು ಡಾ.ಎ.ಟಿ.ಆಶಾ ಲೆನಿನ್ ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಿಸುತ್ತಿದ್ದಾರೆ. ಚಿತ್ರಕ್ಕೆ ಸ್ಯಾಮ್ ಸಿ.ಎಸ್ ಸಂಗೀತ ಸಂಯೋಜಿಸುತ್ತಿದ್ದು, ಎನ್. ಕೆ. ಏಕಾಂಬರಂ ಛಾಯಾಗ್ರಹಣ, ಎ. ಎಲ್. ರಮೇಶ್ ಸಂಕಲನ, ಜಾಕಿ ಕಲಾ ನಿರ್ದೇಶನ ಹಾಗೂ ಸಿಲ್ವಾ ಮತ್ತು ದಿನೇಶ್ ಸುಬ್ಬರಾಯನ್ ಸಾಹಸ ನಿರ್ದೇಶನ ಒದಗಿಸಿದ್ದಾರೆ.




# ಶ್ರೀ ಕೃಷ್ಣದೇವರಾಯನಾಗಿ ಕಿಚ್ಚ ಸುದೀಪ್, ರಿಲೀಸ್‌ಗೂ ಟೈಮ್ ಫಿಕ್ಸ್!

ಕಿಚ್ಚ ಸುದೀಪ್ ಐತಿಹಾಸಿಕ ಸಿನಿಮಾ ಮಾಡ್ತಿದ್ದಾರೆ. ಶ್ರೀ ಕೃಷ್ಣದೇವರಾಯನ ಕತೆಗೆ ಜೀವ ತುಂಬಲಿದ್ದಾರೆ. ಈ ಚಿತ್ರ ಅಧಿಕೃತವಾಗಿ ಅನೌನ್ಸ್ ಆಗಿದೆ. ಚಿತ್ರಕ್ಕೆ ಶ್ರೀ ಕೃಷ್ಣದೇವರಾಯ ಅಂತಲೇ ಟೈಟಲ್ ಇದೆ.

ಕಿಚ್ಚ ಸುದೀಪ್ ಅಭಿನಯದ ದೊಡ್ಡ ಪ್ರಾಜೆಕ್ಟ್ ಅನೌನ್ಸ್ ಆಗಿದೆ. ಹುಟ್ಟುಹಬ್ಬದ ದಿನವೇ ಈ ಸಿನಿಮಾ ಸುದ್ದಿ ಹೊರ ಬಂದಿದೆ. ಶ್ರೀ ಕೃಷ್ಣದೇವರಾಯನ ಮೇಲೆ ಐತಿಹಾಸಿಕ ಸಿನಿಮಾ ಮಾಡ್ತಿದ್ದಾರೆ. ಈ ಒಂದು ಚಿತ್ರದಲ್ಲಿ ಕಿಚ್ಚ ಸುದೀಪ್ ಅವರು ಶ್ರೀ ಕೃಷ್ಣದೇವರಾಯನ ಪಾತ್ರ ಮಾಡುತ್ತಿದ್ದಾರೆ. ಈ ಚಿತ್ರದ ಕಾನ್ಸೆಪ್ಟ್ ರಿವೀಲ್ ಮಾಡುವ ಒಂದು ಟೀಸರ್ ಹೊರ ಬಂದಿದೆ. ಇದು ಇಂಟ್ರಸ್ಟಿಂಗ್ ಆಗಿದೆ. ಶ್ರೀ ಕೃಷ್ಣದೇವರಾಯ

ಶ್ರೀ ಕೃಷ್ಣದೇವರಾಯ ಕಥೆ ಕಿಚ್ಚ ಸುದೀಪ್ ಜೀವ ತುಂಬುತ್ತಿದ್ದಾರೆ. ಟಾಲಿವುಡ್‌ನ ಹೆಸರಾಂತ ಚಿತ್ರ ನಿರ್ಮಾಣ ಸಂಸ್ಥೆ ಪೀಪಲ್ಸ್ ಮೀಡಿಯಾ ಫ್ಯಾಕ್ಟರಿ ಹಾಗೂ ಪ್ರಿಯಾ ಸುದೀಪ್ ಅವರ ಸುಪ್ರಿಯಾನ್ವಿ ಸಂಸ್ಥೆ ಈ ಚಿತ್ರವನ್ನ ಜಂಟಿ ಆಗಿಯೇ ನಿರ್ಮಿಸುತ್ತಿವೆ.

**ಶ್ರೀ ಕೃಷ್ಣದೇವರಾಯನಾಗಿ ಕಿಚ್ಚ ಸುದೀಪ್:** ಈ ಚಿತ್ರದ ಹೇಗೆ ಇರುತ್ತದೆ ಅನ್ನುವುದನ್ನ ಬಿಂಬಿಸೋ ಒಂದು ಟೀಸರ್ ಹೊರ ಬಂದಿದೆ. ಈ ಚಿತ್ರದಲ್ಲಿ ಶ್ರೀ ಕೃಷ್ಣದೇವರಾಯ ಆಗಿ ಸುದೀಪ್ ಹೇಗೆ ಕಾಣಿಸುತ್ತಾರೆ ಅನ್ನುವ ಚಿತ್ರಣವು ಇದೆ.

**ಡಿಸೆಂಬರ್-2027 ರಿಲೀಸ್:** ಈ ಶ್ರೀ ಕೃಷ್ಣದೇವರಾಯ ಚಿತ್ರ ರಿಲೀಸ್ ಡೇಟ್ ಕೂಡ ಅನೌನ್ಸ್ ಆಗಿದೆ. ಮುಂದಿನ ವರ್ಷ 2027 ಡಿಸೆಂಬರ್ ತಿಂಗಳಲ್ಲಿಯೇ ಈ ಚಿತ್ರ ರಿಲೀಸ್ ಆಗುತ್ತಿದೆ.

ಸದ್ಯ ಈ ಚಿತ್ರದ ಅನೌನ್ಸ್‌ಮೆಂಟ್ ಮತ್ತು ಟೀಸರ್ ಹೆಚ್ಚು ಹೆಚ್ಚು ಕುತೂಹಲ ಮೂಡಿಸುತ್ತಿದೆ. ಈ ಚಿತ್ರಕ್ಕೆ ಗೌರ್ ಹರಿ .ಕೆ ಮ್ಯೂಸಿಕ್ ಮಾಡ್ತಿದ್ದಾರೆ.

**ಚಿತ್ರದ ನಿರ್ಮಾಪಕರು:** ಶ್ರೀ ಕೃಷ್ಣದೇವರಾಯ ಚಿತ್ರವನ್ನ ಪ್ರಿಯಾ ಸುದೀಪ್ ಅವರ ಸುಪ್ರಿಯಾನ್ವಿ ಸಂಸ್ಥೆ ಹಾಗೂ ಪೀಪಲ್ಸ್ ಮೀಡಿಯಾ ಫ್ಯಾಕ್ಟರಿ ನಿರ್ಮಾಣ ಮಾಡುತ್ತಿದೆ. ಪೀಪಲ್ಸ್ ಮೀಡಿಯಾ ಫ್ಯಾಕ್ಟರಿಯ ವಿಶ್ವ ಪ್ರಸಾದ್ ಹಾಗೂ ಕಾರ್ತಿಕ್ ಪ್ರಸಾದ್ ಈ ಸಿನಿಮಾ ನಿರ್ಮಿಸುತ್ತಿದ್ದಾರೆ. ಸುದೀಪ್ ಪತ್ನಿ ಪ್ರಿಯಾ ಇದಕ್ಕೆ ದುಡ್ಡುಹಾಕುತ್ತಿದ್ದಾರೆ.

**1970 ರಲ್ಲಿ ಬಂದ ಶ್ರೀ ಕೃಷ್ಣದವರಾಯ ಸಿನಿಮಾ:** ಸುದೀಪ್ ಈ ಹಿಂದೆ ರಾಜ ವಿಷ್ಣುವರ್ಧನ ಚಿತ್ರದಲ್ಲಿ ರಾಜನ ಗೆಟಪ್ ಹಾಕಿದ್ದರು. ಆಗಲೂ ಎಲ್ಲರ ಗಮನ ಸೆಳೆದಿದ್ದರು. ಇದೀಗ ಶ್ರೀ ಕೃಷ್ಣದೇವರಾಯನ ಕತೆಗೆ ಜೀವ ತುಂಬುತ್ತಿದ್ದಾರೆ.

ಈ ಹಿಂದೆ ಡಾಕ್ಟರ್ ರಾಜಕುಮಾರ್ ಅವರು ಶ್ರೀ ಕೃಷ್ಣದೇವರಾಯನ ಪಾತ್ರ ಮಾಡಿದ್ದರು. ಈ ಚಿತ್ರಕ್ಕೆ 1970 ರಲ್ಲಿ ಈ ಚಿತ್ರ ಬಂದಿತ್ತು. ಇದಕ್ಕೆ ಶ್ರೀ ಕೃಷ್ಣದೇವರಾಯ ಅಂತ ಹೆಸರಿತ್ತು. ಬಿ.ಆರ್.ಪಂತಲು ಡೈರೆಕ್ಷನ್ ಮಾಡಿದ್ದರು. ರಾಜಕುಮಾರ್ ಚಿತ್ರ ಜೀವನದ ಮೊದಲ ಕಲರ್ ಚಿತ್ರವೂ ಇದಾಗಿತ್ತು ಅನ್ನುವ ಮಾಹಿತಿ ಸಿಗುತ್ತದೆ.

**ಶ್ರೀ ಕೃಷ್ಣದೇವರಾಯನ ಬಗ್ಗೆ:** ಶ್ರೀ ಕೃಷ್ಣದೇವರಾಯ ವಿಜಯನಗರ ಸಾಮ್ರಾಜ್ಯದ ಶ್ರೇಷ್ಠ ಚಕ್ರವರ್ತಿ ಆಗಿದ್ದರು. ಇವರ ಆಳ್ವಿಕೆಯನ್ನ ದಕ್ಷಿಣ ಭಾರತದ ಇತಿಹಾಸದ ಸುವರ್ಣ ಯುಗ ಅಂತಲೆ ಕರೆಯುತ್ತಾರೆ.

ಶ್ರೀ ಕೃಷ್ಣದೇವರಾಯ ಕ್ರಿ.ಶ. 1509 ರಿಂದ 1529 ರವರೆಗೂ ಆಳ್ವಿಕೆ ನಡೆಸಿದರು. ಹೆಚ್ಚು ಕಡಿಮೆ 20 ವರ್ಷಗಳ ಕಾಲ ಭವ್ಯ ಆಳ್ವಿಕೆ ನಡೆಸಿದರು ಅನ್ನುವ ಮಾಹಿತಿ ಸಿಗುತ್ತದೆ.

# ಸೆಪ್ಟೆಂಬರ್ ಶುರುವಾಗ್ತಿದ್ದಂತೆ ತ್ರಿಶಾ ಬಿಗ್ ಅನೌನ್ಸ್‌ಮೆಂಟ್, ಅಭಿಮಾನಿಗಳು ಖುಷ್

ನಟಿ ತ್ರಿಶಾ ಸದಾ ಸುದ್ದಿಯಲ್ಲಿರುವ ನಟಿ. ಈಗ ಸೆಪ್ಟೆಂಬರ್ ಇನ್ನೇನು ಶುರುವಾಗಿದೆ ಅಷ್ಟೆ. ಆಗಲೇ ನಟಿ ಸಿಹಿ ಸುದ್ದಿಯೊಂದನ್ನು ಕೊಟ್ಟಿದ್ದಾರೆ. ಏನದು ಗೊತ್ತಾ?

ನಟಿ ತ್ರಿಶಾ ಅವರು ಇತ್ತೀಚಿನ ದಿನಗಳಲ್ಲಿ ಅತಿಹೆಚ್ಚು ಸುದ್ದಿಯಲ್ಲಿರುವ ನಟಿಯರಲ್ಲಿ ಒಬ್ಬರು. ಅವರ ಕುರಿತು ಆಗಾಗ ಸುದ್ದಿಗಳು ಬರುತ್ತಲೇ ಇರುತ್ತವೆ. ಆಗಾಗ ತ್ರಿಶಾ ಅವರ ಹೆಸರು ಕೇಳಿ ಬರುತ್ತಲೇ ಇರುತ್ತವೆ. ಇದೀಗ ನಟಿ ಹೊಸ ಸುದ್ದಿಯೊಂದು ಕೊಟ್ಟಿದ್ದಾರೆ. ನಟಿ ಇನ್ನು ಸಿನಿಮಾ ಮಾಡೋದೇ ಇಲ್ಲ ಎನ್ನುತ್ತಿರುವಾಗಲೇ ಒಂದು ಗುಡ್‌ನ್ಯೂಸ್ ಕೊಟ್ಟಿದ್ದಾರೆ.

ಸೆಪ್ಟೆಂಬರ್ ತಿಂಗಳ ಆರಂಭದಲ್ಲಿ ನಟಿ ತ್ರಿಶಾ ಅವರು ಗುಡ್‌ನ್ಯೂಸ್ ಕೊಟ್ಟಿದ್ದು ಹೊಸ ಸಿನಿಮಾ ಅನೌನ್ಸ್ ಮಾಡಿದ್ದಾರೆ. ಅಂತಿಂಥ ಸಿನಿಮಾ ಅಲ್ಲ ಇದು, ಇದು ಮಹಿಳಾ ಪ್ರಧಾನ ಪಾತ್ರದ ಸಿನಿಮಾ. ಅದರಲ್ಲಿಯೂ ಸೈಕಲಾಜಿಕಲ್ ಥ್ರಿಲ್ಲರ್ ಮೂವಿ.

ಬುಧವಾರ ಪನೋರಮಾ ಸ್ಟುಡಿಯೋಸ್ ತಮಿಳು ಚಿತ್ರರಂಗದಲ್ಲಿ ತ್ರಿಶಾ, ರಾಧಿಕಾ ಶರತ್‌ಕುಮಾರ್ ಮತ್ತು ಅಪರ್ಣಾ ಬಾಲಮುರಳಿ ನಟಿಸಿರುವ ತನ್ನ ಮೊದಲ ನಿರ್ಮಾಣದ ಸಿನಿಮಾವನ್ನು ಘೋಷಿಸಿತು. ಇನ್ನೂ ಹೆಸರಿಡದ ಈ ಚಿತ್ರವು ಮುಹೂರ್ತ ಸಮಾರಂಭದ ನಂತರ ನಿರ್ಮಾಣವನ್ನು ಪ್ರಾರಂಭಿಸಿದೆ ಎಂದು ಬ್ಯಾನರ್ ಬಹಿರಂಗಪಡಿಸಿದೆ.

ನಿಗೂಢತೆ, ಹಾರರ್ ಮತ್ತು ಸಸ್ಪೆನ್ಸ್ ಅಂಶಗಳನ್ನು ಮಿಶ್ರಣ ಮಾಡುವ ಸೈಕಲಾಜಿಕಲ್ ಥ್ರಿಲ್ಲರ್ ಎಂದು ವಿವರಿಸಲಾದ ಈ ಚಿತ್ರವನ್ನು ರಾಜಾ ಕೃಷ್ಣ ಮೆನನ್ ನಿರ್ದೇಶಿಸಿದ್ದಾರೆ. ನಾಸಿರುದ್ದೀನ್ ಶಾ ಅವರ ಬಾರಾ ಆನಾ (2009), ಅಕ್ಷಯ್ ಕುಮಾರ್ ಅವರ ಏರ್ ಲಿಫ್ಟ್ (2016) ಮತ್ತು ಸೈಫ್ ಅಲಿ ಖಾನ್ ಅವರ ಚೆಫ್ (2017) ನಿರ್ದೇಶನಕ್ಕೆ ಹೆಸರುವಾಸಿಯಾದ ರಾಜಾ ಕೃಷ್ಣ ಮೆನನ್, ಮುಂಬರುವ ಚಿತ್ರದೊಂದಿಗೆ ತಮಿಳು ಚಿತ್ರಕ್ಕೆ ಪಾದಾರ್ಪಣೆ ಮಾಡುತ್ತಾರೆ. ಇದು ಅವರ ಮೊದಲ ಸೈಕಲಾಜಿಕಲ್ ಹಾರರ್ ಮೂವಿ.

ವೆರೈಟಿ ಪ್ರಕಾರ, ಈ ಚಿತ್ರದ ಚಿತ್ರೀಕರಣ ಲಂಡನ್‌ನಲ್ಲಿ ನಡೆಯುತ್ತಿದೆ. ಲೋಕೋಮೋಟಿವ್ ಗ್ಲೋಬಲ್ ಸಹಯೋಗದೊಂದಿಗೆ ಪನೋರಮಾ ಸ್ಟುಡಿಯೋಸ್ ಪ್ರಸ್ತುತಪಡಿಸಿದ ಈ ಚಿತ್ರವು ಫ್ಯೂಷನ್ ಫ್ಲಿಕ್ಸ್ ಮತ್ತು ಲೋಕೋಮೋಟಿವ್ ಗ್ಲೋಬಲ್ ನಡುವಿನ ಅಧಿಕೃತ ನಿರ್ಮಾಣ ಉದ್ಯಮವಾಗಿದೆ.

ಕುಮಾರ್ ಮಂಗತ್ ಪಾಠಕ್, ಅಭಿಷೇಕ್ ಪಾಠಕ್, ವಿಕಾಸ್ ಶರ್ಮಾ, ಅಮಿತ್ ದಾಲ್ಮಿಯಾ ಮತ್ತು ಸುಂದರ್ ಆರನ್ ನಿರ್ಮಾಪಕರಾಗಿ ಸೇವೆ ಸಲ್ಲಿಸುತ್ತಾರೆ. ತಂಡವನ್ನು ಪೂರ್ಣಗೊಳಿಸುವಲ್ಲಿ ಸಹ-ನಿರ್ಮಾಪಕರಾದ ಜಾರ್ಜ್ ಕ್ಯಾಮರೂನ್ ಮತ್ತು ರಾಜೇಶ್ ಮೆನನ್, ಜೊತೆಗೆ ಕ್ರಿಯೇಟಿವ್ ಪ್ರೊಡ್ಯೂಸರ್ ಅಭಿನವ್ ಮೆಹ್ರೋತ್ರಾ ಇದ್ದಾರೆ.

ಚಿತ್ರದ ಕಥೆ, ಹೆಚ್ಚುವರಿ ಪಾತ್ರವರ್ಗ ಮತ್ತು ತಾಂತ್ರಿಕ ಸಿಬ್ಬಂದಿ ಸೇರಿದಂತೆ ಹೆಚ್ಚಿನ ವಿವರಗಳನ್ನು ತಯಾರಕರು ಇನ್ನೂ ಬಹಿರಂಗಪಡಿಸಿಲ್ಲ. ಮುಂದಿನ ದಿನಗಳಲ್ಲಿ ಅವರಿಂದ ಹೆಚ್ಚಿನ ವಿವರಗಳ ಅಧಿಕೃತ ಪ್ರಕಟಣೆಯನ್ನು ನಿರೀಕ್ಷಿಸಲಾಗಿದೆ.



ಪನೋರಮಾ ಸ್ಟುಡಿಯೋಸ್ ಅಜಯ್ ದೇವಗನ್ ಅಭಿನಯದ ದೃಶ್ಯಂ ಫ್ರಾಂಚೈಸ್‌ಗೆ ಹೆಸರುವಾಸಿಯಾಗಿದೆ. ಈ ಬ್ಯಾನರ್ ಮರಾಠಿ, ಮಲಯಾಳಂ, ಪಂಜಾಬಿ ಮತ್ತು ತೆಲುಗು ಸೇರಿದಂತೆ ಇತರ ಭಾಷೆಗಳ ಚಲನಚಿತ್ರಗಳನ್ನು ಸಹ ಬೆಂಬಲಿಸಿದೆ. ಇತ್ತೀಚೆಗೆ, ಅವರು ಭಾವನಾ ಅಭಿನಯದ ಅನೋಮಿ ಮತ್ತು ಕುಂಚಕೋ ಬೋಬನ್ ಅವರ ಉನ್ಮಥಮ್ ಅನ್ನು ಬೆಂಬಲಿಸಿದರು.

ಈ ಬ್ಯಾನರ್ ನಟರಾದ ಫಹಾದ್ ಫಾಸಿಲ್ ಮತ್ತು ನಿವಿನ್ ಪೌಲಿ ಅವರೊಂದಿಗೆ ಬಹು-ಚಲನಚಿತ್ರ ಒಪ್ಪಂದಗಳಿಗೆ ಸಹಿ ಹಾಕಿದೆ. ಇದು ಮುಂಬರುವ ಚಿತ್ರಗಳಾದ ಆಸಿಫ್ ಅಲಿ ಅವರ ಟಿಕಿ ಟಾಕಾ ಮತ್ತು ಟೊವಿನೋ ಥಾಮಸ್ ಅಭಿನಯದ ಮುಂಪೆಯೊಂದಿಗೆ ಸಹ ಕೆಲಸ ಮಾಡುತ್ತಿದೆ.

ತ್ರಿಷಾ ಬಗ್ಗೆ ಹೇಳುವುದಾದರೆ, ಅವರು ಇತ್ತೀಚೆಗೆ ಸೂರ್ಯ ಮತ್ತು ಆರ್‌ಜೆ ಬಾಲಾಜಿ ಅವರೊಂದಿಗೆ ಕರುಪ್ಪು ಚಿತ್ರದಲ್ಲಿ ಕಾಣಿಸಿಕೊಂಡರು. ಈ ಚಿತ್ರವು ಬ್ಲಾಕ್‌ಬಸ್ಟರ್ ಆಗಿ, ಜಾಗತಿಕ ಬಾಕ್ಸ್ ಆಫೀಸ್‌ನಲ್ಲಿ 300 ಕೋಟಿಗೂ ಹೆಚ್ಚು ಗಳಿಸಿದೆ ಎಂದು ವರದಿಯಾಗಿದೆ. ಅವರ ಮುಂಬರುವ ಚಿತ್ರಗಳಲ್ಲಿ ಚಿರಂಜೀವಿ ಜೊತೆಗಿನ ವಿಶ್ವಂಭರವೂ ಸೇರಿದೆ.

# ಕೃಷಿ ಸಾಲ ಮನ್ನಾಗೆ ವಿಜಯೇಂದ್ರ ಒತ್ತಾಯ

## ವಿಶೇಷ ಅಧಿವೇಶನ ಕರೆಯಲು ಆಗ್ರಹ । ರೈತರ ಆತ್ಮಹತ್ಯೆ ತಡೆಗೆ ಅಗತ್ಯ ಕ್ರಮ ವಹಿಸಿ

• ಪ್ರಜೋದಯ ವರದಿ



**ರಾಯಚೂರು:** ಎಸ್‌ಸಿಪಿ–ಟಿಎಸ್‌ಪಿ ಹಣ ದುರ್ಬಳಕೆ, ಬರಪೀಡಿತ ಜಿಲ್ಲೆಯ ರೈತರ ಕೃಷಿ ಸಾಲ ಮನ್ನಾ ಸೇರಿ ವಿವಿಧ ಗಂಭೀರ ವಿಷಯಗಳ ಚರ್ಚೆಗಾಗಿ ವಿಶೇಷ ಅಧಿವೇಶನ ನಡೆಸಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ರಾಯಚೂರಿನಿಂದ ಬಳ್ಳಾರಿ ವರೆಗೆ ನಡೆಯುತ್ತಿರುವ 3ನೇ ದಿನದ ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ದಲಿತರು ಹಾಗು ಶೋಷಿತ ಸಮುದಾಯಗಳನ್ನು ಕೇವಲ ಓಟ್ ಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿದೆ. ದಲಿತರ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಎಸ್‌ಸಿಪಿ–ಟಿಎಸ್‌ಪಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು.

ರಾಜ್ಯದ ಅನ್ನದಾತರು ಗಂಭೀರ ಸಂಕಷ್ಟದಲ್ಲಿ ಸಿಲುಕಿದ್ದರೂ ಕಾಂಗ್ರೆಸ್ ಸರ್ಕಾರ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 3,655 ರೈತರು ಆತಹತ್ಯೆಗೆ ಶರಣಾಗಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲೇ 937 ರೈತರು ಆತಹತ್ಯೆ ಮಾಡಿಕೊಂಡಿದ್ದಾರೆ. ಕಲಬುರಗಿಯಲ್ಲಿ 295, ರಾಯಚೂರಿನಲ್ಲಿ 169, ಬೀದರ್ 220 ಹಾಗು ಕೊಪ್ಪಳದಲ್ಲಿ 80ಕ್ಕೂ ಹೆಚ್ಚು ರೈತರ ಆತಹತ್ಯೆ ಪ್ರಕರಣಗಳು ದಾಖಲಾಗಿವೆ. ಈ ಅಂಕಿ–ಅಂಶಗಳು ಸರ್ಕಾರದ ರೈತ ವಿರೋಧಿ ಧೋರಣೆಗೆ ಸಾಕ್ಷಿಯಾಗಿದೆ ಎಂದು ಕಿಡಿಕಾರಿದರು.

ಸಚಿವ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು, ಕಲಬುರಗಿ ಜಿಲ್ಲೆಯಲ್ಲೇ 295 ರೈತರು ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರವನ್ನು ಗಂಭೀರವಾಗಿ ಗಮನಿಸಬೇಕು. ಅನ್ನದಾತನ ಸಂಕಷ್ಟಕ್ಕೆ ಸರ್ಕಾರ ಮಿಡಿಯುವ ಕಾಳಜಿ ತೋರಬೇಕು. ರಾಜ್ಯದ ಸುಮಾರು 190ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಬರದ ಪರಿಸ್ಥಿತಿ ನಿರ್ಮಾಣವಾಗಿದ್ದು, ಬರಪೀಡಿತ ಪ್ರದೇಶಗಳ ರೈತರ ಬೆಳೆ ಸಾಲವನ್ನು 5 ಲ.ರೂ. ವರೆಗೆ ಮನ್ನಾ ಮಾಡಬೇಕೆಂದು ಒತ್ತಾಯಿಸಿದರು.

ಜೋಳದ ಬೆಂಬಲ ಬೆಲೆಯ ಸುಮಾರು 145 ಕೋ. ರೂ. ಬಾಕಿ ಇದ್ದು, ಅದನ್ನು ಕೂಡಲೇ ರೈತರಿಗೆ ಪಾವತಿಸಬೇಕು. ಹೈನುಗಾರರಿಗೆ ನೀಡಬೇಕಾದ ಪ್ರೋತ್ಸಾಹ ಧನವನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ನೀಡಲಾಗುತ್ತಿತ್ತು. ಈಗ ಅದು ಬಿಡುಗಡೆಯಾಗುತ್ತಿಲ್ಲ. ರೈತರ ಬದುಕಿನೊಂದಿಗೆ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂದು ಆರೋಪಿಸಿದರು.

ನಾಡಿನ ರೈತರ ಸಮಸ್ಯೆಗಳ ಕುರಿತು ಸಮಗ್ರವಾಗಿ ಚರ್ಚಿಸಲು ರಾಜ್ಯ ಸರ್ಕಾರ ವಿಶೇಷ ಅಧಿವೇಶನವನ್ನು ಕರೆಯಬೇಕು. ಹೊಸಪೇಟೆ ಜಲಾಶಯದಲ್ಲಿ ಹೂಳೆತ್ತುವ ಕಾರ್ಯ ಕೈಗೊಳ್ಳಬೇಕು. 31 ಟಿಎಂಸಿ ನೀರನ್ನು ಹಿಡಿದಿಟ್ಟುಕೊಳ್ಳುವ ಉದ್ದೇಶದಿಂದ ಸಮಾನಾಂತರ ಹಂಚಿಕೆ ವ್ಯವಸ್ಥೆಗೆ ನವಲೆ ಜಲಾಶಯಕ್ಕೆ ಆದ್ಯತೆ ನೀಡಬೇಕೆಂದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಿಯಲ್ ಎಸ್ಟೇಟ್ ವಿಚಾರಗಳ ಬಗ್ಗೆ ಹೆಚ್ಚು ಗಮನ ಹರಿಸುತ್ತಿದ್ದಾರೆ. ಈಗಲಾದರೂ ಕನಿಷ್ಟ ಶೇ.25 ರಷ್ಟು ಗಮನವನ್ನು ಅನ್ನದಾತನ ಸಮಸ್ಯೆಗಳ ಕಡೆಗೆ ಹರಿಸಿ ಎಂದು ಹೇಳಿದರು. ಮುಖ್ಯಮಂತ್ರಿಗಳೇ, ರೈತರ ಸಮಸ್ಯೆಗಳ ಬಗ್ಗೆ ಗಮನಹರಿಸಿ ರಾಜ್ಯದ ರೈತರು ಸಂಕಷ್ಟದಲ್ಲಿದ್ದಾರೆ. ಅವರ ಸಮಸ್ಯೆಗಳಿಗೆ ಪರಿಹಾರ ನೀಡುವುದು ಸರ್ಕಾರದ ಮೊದಲ ಆದ್ಯತೆಯಾಗಬೇಕು ಎಂದರು.

ರಾಜ್ಯದಲ್ಲಿ ಸರಿಯಾಗಿ ಮಳೆಯಾಗುತ್ತಿಲ್ಲ. ಸಂಪೂರ್ಣ ಬರದ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೂ ತಮಿಳುನಾಡಿಗೆ ಮಾತ್ರ ರಾಜ್ಯದ ಜಲಾಶಯಗಳಿಂದ ನೀರು ಹರಿಸಲಾಗುತ್ತಿದೆ. ರಾಜ್ಯ ಸರ್ಕಾರಕ್ಕೆ ಇಲ್ಲಿನ ರೈತರು ಹಾಗೂ ಜನರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ ಎಂದು ಕಿಡಿಕಾರಿದರು.

ಬಿಜೆಪಿ ಪಾದಯಾತ್ರೆ ಸಾಗುವ ಮಾರ್ಗದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಬೇಕೆಂದು ಕೆಪಿಸಿಸಿ ಅಧ್ಯಕ್ಷ ಆರ್.ಬಿ. ಹರಿಪ್ರಸಾದ್ ಕರೆ ನೀಡಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಪಾದಯಾತ್ರೆಯನ್ನು ತಡೆಯುವುದಾದರೆ ತಡೆಯಿರಿ. ನಮ್ಮನ್ನು ಗಲ್ಲಿಗೇರಿಸಿದರೂ ಪರವಾಗಿಲ್ಲ. ಆದರೆ ಮೊದಲು ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಎಂದು ಅವರು ತಿರುಗೇಟು ನೀಡಿದರು.

## ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿ




• ಪ್ರಜೋದಯ ವರದಿ

**ಹಾಸನ:** ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ರವರ ವತಿಯಿಂದ UGC-NET june 2026 ಪರೀಕ್ಷೆಯು ಮಲ್ನಾಡ್ ಇಂಜಿನಿಯರಿಂಗ್ ಕಾಲೇಜು, ರಾಜೀವ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸೆ.9 ಮತ್ತು 10 ರಂದು ಪರೀಕ್ಷೆ ನಡೆಯಲ್ಲಿದ್ದು, ಸದರಿ ಪರೀಕ್ಷೆ ಸುಗಮವಾಗಿ ನಡೆಸಲು ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಹಾಗೂ 200 ಮೀಟರ್ ವ್ಯಾಪ್ತಿಯಲ್ಲಿ ಇರುವ ಜೆರಾಕ್ಸ್, ಸೈಬರ್, ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚುವಂತೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಕೆ.ಎಸ್ ಲತಾಕುಮಾರಿ ಆದೇಶಿಸಿದ್ದಾರೆ.

ಈ ಆದೇಶವನ್ನು ಪರೀಕ್ಷಾರ್ಥಿಗಳು ಮತ್ತು ಪರೀಕ್ಷಾ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿಗಳು/ಸಿಬ್ಬಂದಿಗಳು ಹೊರತುಪಡಿಸಿ ಇತರರು ಯಾರು ಪ್ರವೇಶಿಸುವಂತಿಲ್ಲವೆಂದು ನಿರ್ಬಂಧಿಸಿ ಆದೇಶ ಹೊರಡಿಸಿದ್ದಾರೆ.

## ಸಾರ್ವಜನಿಕ ಪ್ರಕಟಣೆ

ಪ್ರಶಾಂತ್‌ಕುಮಾರ್ ಬಿನ್ ಲೇಟ್ ಫ್ರಾನ್ಸಿಸ್ ಸುಮಾರು 54 ವರ್ಷ, ಡಿ.ಎ.ಆರ್. ಪೊಲೀಸ್ ಕ್ವಾರ್ಟಸ್ ಹೊಸಲೈನ್ ರಸ್ತೆ, ಹಾಸನ ಆದ ನಾನು ಎಸ್.ಬಿ.ಐ. ಬ್ಯಾಂಕ್, ಎನ್.ಆರ್. ಸರ್ಕಲ್ ಶಾಖೆಯಲ್ಲಿ ಉಳಿತಾಯ ಖಾತೆ ಹೊಂದಿದ್ದು, ಆ ಸಂಬಂಧ ಚೆಕ್ ಪುಸ್ತಕವನ್ನು ಪಡೆದುಕೊಂಡಿರುತ್ತೇನೆ. ನಾನು ನನ್ನ ಉಳಿತಾಯ ಖಾತೆ ಸಂಖ್ಯೆ: 64017380384 ಕ್ಕೆ ಸೇರಿದ ಚೆಕ್ ಪುಸ್ತಕ ಮತ್ತು ಸದರಿ ಚೆಕ್ ಪುಸ್ತಕದಲ್ಲಿ ಚೆಕ್ಕುಗಳಿಗೆ ಸಹಿ ಮಾಡಿದ್ದು, ಸದರಿ ಚೆಕ್ ಪುಸ್ತಕ ಮತ್ತು ಸಹಿ ಮಾಡಿದ ಚೆಕ್ ಹಾಳೆಗಳು ಕಳೆದು ಹೋಗಿದ್ದು, ಆ ಸಂಬಂಧ ನಾನು ನನ್ನ ಖಾತೆ ಇರುವ ಎಸ್.ಬಿ.ಐ. ಬ್ಯಾಂಕ್‌ಗೆ ಅರ್ಜಿ ನೀಡಿ ನಾನು ಪಡೆದ ಚೆಕ್ ಪುಸ್ತಕದ ಚೆಕ್‌ಗಳನ್ನು ರದ್ದು ಮಾಡುವಂತೆ ದಿನಾಂಕ: 29-05-2025 ರಂದು ಅರ್ಜಿ ನೀಡಿದ್ದು, ತದ ನಂತರದ ದಿನಾಂಕ: 13-01-2026 ರಲ್ಲಿ ನನ್ನ ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸಿರುತ್ತೇನೆ.

ಆದ್ದರಿಂದ ನನ್ನ ಉಳಿತಾಯ ಖಾತೆಗೆ ಸೇರಿದ ಯಾವುದೇ ಚೆಕ್ ಪುಸ್ತಕ ಹಾಗೂ ಸಹಿ ಮಾಡಿರುವ ಚೆಕ್ ಹಾಳೆಗಳು ಯಾರಿಗಾದರೂ ದೊರಕಿದಲ್ಲಿ ಸದರಿ ಚೆಕ್ ಪುಸ್ತಕ ಮತ್ತು ಹಾಳೆಗಳನ್ನು ನನಗೆ ಹಿಂದಿರುಗಿಸಬೇಕಾಗಿ ಸಾರ್ವಜನಿಕರಲ್ಲಿ ಕೇಳಿಕೊಳ್ಳುತ್ತೇನೆ. ಒಂದು ವೇಳೆ ಸದರಿ ಚೆಕ್ಕುಗಳು ಯಾರಾದರೂ ದುರುಪಯೋಗ ಪಡಿಸಿಕೊಂಡಲ್ಲಿ ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಈ ಪತ್ರಿಕೆ ಪ್ರಕಟಣೆ ಮೂಲಕ ತಿಳಿಯಪಡಿಸಿರುತ್ತೇನೆ.

ಸ್ಥಳ: ಹಾಸನ　　ಸಹಿ/-
ದಿನಾಂಕ : 03-09-2026　　ಪ್ರಶಾಂತ್‌ಕುಮಾರ್

## ದೊಡ್ಡಮತಿಘಟ್ಟದಲ್ಲಿ ಜೈವಿಕ ಕೀಟನಾಶಕ ಜಾಗೃತಿ



• ಪ್ರಜೋದಯ ವರದಿ

**ದೊಡ್ಡಮತಿಘಟ್ಟ:** ಕೃಷಿಯಲ್ಲಿ ರಾಸಾಯನಿಕ ಕೀಟನಾಶಕಗಳ ಮೇಲಿನ ಅವಲಂಬನೆ ಕಡಿಮೆ ಮಾಡಿ ಪರಿಸರ ಸ್ನೇಹಿ ಹಾಗು ಸುಸ್ಥಿರ ಬೆಳೆ ಸಂರಕ್ಷಣಾ ಕ್ರಮಗಳನ್ನು ಉತ್ತೇಜಿಸುವ ಉದ್ದೇಶದಿಂದ ದೊಡ್ಡಮತಿಘಟ್ಟ ಗ್ರಾಮದಲ್ಲಿ ಜೈವಿಕ ಕೀಟನಾಶಕಗಳು ಮತ್ತು ಅವುಗಳ ಬಳಕೆ ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು.

ಹಾಸನದ ಕಾರೆಕೆರೆ ಕೃಷಿ ಮಹಾವಿದ್ಯಾಲಯ ಅಂತಿಮ ವರ್ಷದ ಬಿಎಸ್ಸಿ ಕೃಷಿ ವಿದ್ಯಾರ್ಥಿಗಳು ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಶಿಬಿರ ಆಯೋಜಿಸಲಾಗಿತ್ತು.

ಡಾ|| ಸೌಮ್ಯ ಹಾಗು ಡಾ|| ನಮ್ರತಾ ಅವರು ರೈತರಿಗೆ ಜೈವಿಕ ಕೀಟನಾಶಕಗಳ ಮಹತ್ವ, ವಿಧಗಳು, ಬಳಕೆಯ ವಿಧಾನ ಹಾಗು ಬೆಳೆಗಳಲ್ಲಿ ಕೀಟ ಮತ್ತು ರೋಗಗಳ ನಿರ್ವಹಣೆಯಲ್ಲಿ ಪಾತ್ರದ ಕುರಿತು ಮಾಹಿತಿ ನೀಡಿದರು.

ಜೈವಿಕ ಕೀಟನಾಶಕಗಳು, ಸೂಕ್ಷ್ಮಜೀವಿಗಳು ಅಥವಾ ನೈಸರ್ಗಿಕ ಮೂಲಗಳಿಂದ ದೊರೆಯುವ ವಸ್ತುಗಳನ್ನು ಆಧರಿಸಿದ್ದು, ಬೆಳೆಗಳಲ್ಲಿನ ಕೀಟ ಮತ್ತು ರೋಗಕಾರಕಗಳನ್ನು ನಿಯಂತ್ರಿಸಲು ಬಳಸಬಹುದಾಗಿದೆ ಎಂದು ಸಲಹೆ ನೀಡಿದರು.

ಜೈವಿಕ ಕೀಟನಾಶಕಗಳ ಬಳಕೆಯಿಂದ ಮಣ್ಣಿನ ಆರೋಗ್ಯ ಹಾಗು ಪರಿಸರ ಕಾಪಾಡಿಕೊಳ್ಳುವಲ್ಲಿ ಸಹಾಯವಾಗುತ್ತದೆ. ರಾಸಾಯನಿಕ ಕೀಟನಾಶಕಗಳ ಅತಿಯಾದ ಮತ್ತು ಅಸಮರ್ಪಕ ಬಳಕೆಯಿಂದ ಉಂಟಾಗಬಹುದಾದ ಕೀಟಗಳ ಪ್ರತಿರೋಧ, ಪರಿಸರ ಮಾಲಿನ್ಯ ಹಾಗು ಆಹಾರದಲ್ಲಿ ಕೀಟನಾಶಕ ಅವಶೇಷಗಳಂತಹ ಸಮಸ್ಯೆಗಳನ್ನು ಕಡಿಮೆ ಮಾಡುವಲ್ಲಿ ಜೈವಿಕ ವಿಧಾನಗಳು ಮಹತ್ವದ ಪಾತ್ರ ವಹಿಸಬಹುದು ಎಂದು ವಿದ್ಯಾರ್ಥಿಗಳು ತಿಳಿಸಿದರು.

ಟ್ರೈಕೋಡರ್ಮಾ ಮುಂತಾದ ಜೈವಿಕ ನಿಯಂತ್ರಣಕಾರಕಗಳನ್ನು ಮಣ್ಣಿನಿಂದ ಹರಡುವ ರೋಗಗಳ ನಿರ್ವಹಣೆಯಲ್ಲಿ ಬಳಸುವ ಕುರಿತು ಮಾಹಿತಿ ನೀಡಲಾಯಿತು.

## ಸಮಯಕ್ಕೆ ಬಾರದ ಬಸ್: ವಿದ್ಯಾರ್ಥಿಗಳಿಗೆ ಸಂಕಷ್ಟ

• ಪ್ರಜೋದಯ ವರದಿ




**ಸಕಲೇಶಪುರ:** ಮಲೆನಾಡಿನ ಗ್ರಾಮೀಣ ಭಾಗದಲ್ಲಿ ಸಾರ್ವಜನಿಕ ಸಾರಿಗೆಯೇ ಪ್ರಮುಖ ಆಧಾರವಾಗಿದ್ದು, ಬಸ್‌ಗಳ ಸಮಯಪಾಲನೆ ಇಲ್ಲದಿರುವುದರಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗು ಸಾರ್ವಜನಿಕರು ಪ್ರತಿನಿತ್ಯ ತೊಂದರೆ ಅನುಭವಿಸುವಂತಾಗಿದೆ.

ಸಕಲೇಶಪುರದಿಂದ ಸುಂಡೆಕೆರೆ–ಉದಯವಾರ–ಬೆಳಗೋಡು–ಆಲೂರು–ಹಾಸನ–ಮೈಸೂರು ಮಾರ್ಗದಲ್ಲಿ ಸಂಚರಿಸುವ ರೂಟ್ ನಂಬರ್ 37ರ ಬಸ್ ಅನ್ನು ಬೆಳಿಗ್ಗೆ 8 ಗಂಟೆಗೆ ನಿಯಮಿತವಾಗಿ ಬಿಡಬೇಕು ಹಾಗು ಸಮಯಪಾಲನೆ ಕಡ್ಡಾಯಗೊಳಿಸಬೇಕು ಎಂದು ಹೊಸಕೊಪ್ಪಲು ಹಾಗು ಬೆಳಗೋಡು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಬಸ್ ಸಂಚಾರ ತಡೆದು ಒತ್ತಾಯಿಸಿದರು.

ಬಸ್ ತಡವಾಗಿ ಸಂಚರಿಸುವುದರಿಂದ ವಿದ್ಯಾರ್ಥಿಗಳು ಸಮಯಕ್ಕೆ ಶಾಲಾ– ಕಾಲೇಜು ತಲುಪಲು ಪರದಾಡುವಂತಾಗಿದೆ. ಕೆಲವೊಮ್ಮೆ ಬಸ್‌ಗಾಗಿ ಹೆಚ್ಚು ಸಮಯ ಕಾಯಬೇಕಾಗುವುದರಿಂದ ವಿದ್ಯಾರ್ಥಿಗಳು ನಡೆದುಕೊಂಡೇ ತೆರಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಭಾಗದಲ್ಲಿ ಕಾಡಾನೆಗಳ ಸಂಚಾರವೂ ಹೆಚ್ಚಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ನಡೆದುಕೊಂಡು ಹೋಗುವುದು ಅಪಾಯಕಾರಿಯಾಗಿದೆ. ಬಸ್ ಸೇವೆ ವಿಳಂಬವಾಗುತ್ತಿರುವುದರಿಂದ ಜನರ ಸುರಕ್ಷತೆಯ ಬಗ್ಗೆಯೂ ಆತಂಕ ಎದುರಾಗಿದೆ.

ಬಸ್ ಅನ್ನು ನಿಗದಿತ ಸಮಯಕ್ಕೆ ಸಂಚರಿಸುವಂತೆ ಮನವಿ ಮಾಡಿದರು. ನಿಗದಿತ ಸಮಯಕ್ಕೆ ಬಸ್ ಬಂದರೆ ಸಾಕು. ವಿದ್ಯಾರ್ಥಿಗಳು ಸಮಯಕ್ಕೆ ಶಾಲಾ–ಕಾಲೇಜು ತಲುಪಬೇಕು. ಆನೆಗಳ ಭೀತಿ ಇರುವ ಪ್ರದೇಶದಲ್ಲಿ ಮಕ್ಕಳು ನಡೆದುಕೊಂಡು ಹೋಗುವ ಪರಿಸ್ಥಿತಿ ತಪ್ಪಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

ರೂಟ್ ನಂಬರ್ 37ರ ಬಸ್ ಬೆಳಿಗ್ಗೆ 8 ಗಂಟೆಗೆ ನಿಯಮಿತವಾಗಿ ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕು. ಚಾಲಕ ಹಾಗೂ ನಿರ್ವಾಹಕರು ಮತ್ತು ಸಾರಿಗೆ ಇಲಾಖೆಗೆ ಬಸ್ ಸಮಯ ಪಾಲನೆಯನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಹಾಗು ಸಾರ್ವಜನಿಕರಿಗೆ ಸುರಕ್ಷಿತ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು ಎಂದು ಸಾರ್ವ ಜನಿಕರು ಆಗ್ರಹಿಸಿದ್ದಾರೆ.

**IN THE COURT OF THE II ADDL. SENIOR CIVIL JUDGE & JMFC AT HASSAN**
**R.A. No. 134/2024**

APPELLANT :: Mr. Umesha,
S/o Late Karigowda,
Aged about 44 years,
R/o Bhoovanahalli Village,
Kasaba Hobli, Hassan Taluk.

V/s

Respondent No. 6. Mrs. Radha
D/o Late Karigowda,
Aged about 39 years,

Respondent No. 7. Mrs. Nagamma
D/o Late Karigowda,
Aged about 37 years,

Respondent No. 8. Mrs. Vani
D/o Late Karigowda
Aged about 35 years,

Respondent No.6 to 8 are resident at: Bhoovanahalli Village, Kasaba Hobli, Hassan Taluk, Hassan District.

**APPEAL NOTICE TO THE RESPONDENT NO.6 TO 8**

Take notice that the above mentioned case is filed by the Appellant to call for the entire records on the file of the Hon'ble VI Addl. Civil Judge & JMFC, Hassan in O.S. No.767/2017 and to set aside the Judgment and decree passed in O.S. No.767/2017 on the file of the Hon'ble VI Addl. Civil Judge & JMFC, Hassan and dismissed the entire suit by allowing this appeal and to pass such other suitable orders as this Hon'ble Court deems fit to grant in the facts and circumstances of the case and in the interest of justice and equity. The suit is posted on 29/09/2026 at 11 A.M. for appearance of the Respondent No.6 to 8. The above said Respondents are hereby directed to appear before this Hon'ble Court on the above date either personally or through their respective counsel failing which the appeal will be prosecuted by placing the Respondent No.6 to 8 Ex-parte. Objections if any shall be filed by the Respondent No.6 to 8 within 30 days from publication of this notice.

**UNDER THE ORDERS OF THE COURT.**

Given under my hand and seal of this Court on 02/09/2026

Advocates for Plaintiff
Mohammed Jaffar,
Advocate,
Channambika Complex,
2nd Floor, Sampige Road,
Hassan - 573 201
Date: 02-09-2026

Shirastedar Court of
prl. Senior Civil Judge &
CJM at Hassan.



ಹಾಸನದ ಡಿಸಿಸಿ ಬ್ಯಾಂಕಿನ ವತಿಯಿಂದ ನಡೆದ 2025-26 ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಬೇಲೂರು ತಾಲ್ಲೂಕು ಅರೇಹಳ್ಳಿಯ ಪತ್ತಿನ ಸಹಕಾರ ಸಂಘವು 2025-26ನೇ ಸಾಲಿನಲ್ಲಿ ಅತ್ಯುತ್ತಮ ಪ್ರಶಸ್ತಿ ಪಡೆದ ಹಿನ್ನೆಲೆಯಲ್ಲಿ ಪತ್ತಿನ ಅಧ್ಯಕ್ಷ ನಾಗೇಶ್ ಶೆಟ್ಟಿ ಹಾಗೂ ಸಿಇಒ ಚನ್ನಕೇಶವ ಅವರನ್ನು ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜು ಅವರು ಸನ್ಮಾನಿಸಿದರು.



ಬೇಲೂರಿನ ಶಾಸಕ ಹುಲ್ಲಳ್ಳಿ ಸುರೇಶ್ ಅವರ ಹುಟ್ಟುಹಬ್ಬದ ಅಂಗವಾಗಿ ಎಚ್.ಕೆ.ಸುರೇಶ್ ಅಭಿಮಾನ ಬಳಗದ ವತಿಯಿಂದ ಅರೇಹಳ್ಳಿ ಹೋಬಳಿ ನಾರ್ವೆ ಗ್ರಾಮದ 2 ಸರಕಾರಿ ಶಾಲೆಗಳಿಗೆ ಕ್ರೀಡಾ ಸಾಮಗ್ರಿಗಳನ್ನು ವಿತರಿಸಲಾಯಿತು.

## ವಿವಿಧ ಜಾತಿಯ 800 ಗಿಡಗಳ ವಿತರಣೆ

### ಪರಿಸರ ಉಳಿಸಲು ಸಹಕರಿಸಿ: ಪ್ರವೀಣ್

• ಪ್ರಜೋದಯ ವರದಿ



**ಆಲೂರು:** ಕಸಬಾ ತೊಗರನಹಳ್ಳಿ ಗ್ರಾಮದಲ್ಲಿ ಸಾವಯವ ಕೃಷಕರ ಸಂಘದ ವತಿಯಿಂದ ರೈತ ಪ್ರವೀಣ್ ಅವರು ಪರಿಸರ ಉಳಿಸಬೇಕು ಎಂಬ ದೂರ ದೃಷ್ಟಿಯಿಂದ ಆಸಕ್ತ ಗ್ರಾಮಸ್ಥರಿಗೆ ಸುಮಾರು 800 ವಿವಿಧ ಜಾತಿಯ ಹೂ ಮತ್ತು ಮರ ಆಧಾರಿತ ಗಿಡಗಳನ್ನು ವಿತರಿಸಿದರು.

ತೊಗರನಹಳ್ಳಿ ಗ್ರಾಮದಲ್ಲಿ ಪರಿಸರ ಸಂರಕ್ಷಣೆ ಹಾಗೂ ಹಸಿರು ಪರಿಸರ ನಿರ್ಮಾಣದ ಉದ್ದೇಶದಿಂದ ಗ್ರಾಮದ ಪರಿಸರ ಪ್ರೇಮಿಗಳು, ಸಾರ್ವಜನಿಕರು, ಯುವಕರು, ಮಹಿಳೆಯರು ಮತ್ತು ಮಕ್ಕಳ ಸಹಭಾಗಿತ್ವದಲ್ಲಿ ಗ್ರಾಮಸ್ಥರಿಗೆ ನಿಂಬೆ, ದಾಳಿಂಬೆ, ವಾಟರ್ ಆಪಲ್, ಪನ್ನೇರಲೆ ಮತ್ತು ಮರ ಆಧಾರಿತ ಗಿಡಗಳಾದ ಹೊನ್ನೆ, ಬೀಟೆ, ಆಲ, ಹತ್ತಿ, ಬೇವು, ಅರಳಿ, ಬನ್ನಿ ಗಿಡಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅವರು. ಪ್ರಸ್ತುತ ಹೆಚ್ಚುತ್ತಿರುವ ಪರಿಸರ ಮಾಲಿನ್ಯ, ಅರಣ್ಯ ನಾಶ ಮತ್ತು ಹವಾಮಾನ ಬದಲಾವಣೆಯನ್ನು ತಡೆಯಲು ಪ್ರತಿಯೊಬ್ಬರೂ ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ನೆಟ್ಟು ಬೆಳೆಸಬೇಕು. ನಾವು ಈಗಾಗಲೆ ಪರಿಸರವನ್ನು ಹಾಳು ಮಾಡಿಕೊಂಡು ವಿಷ ಅನಿಲ, ಆಹಾರ ಸೇವಿಸುತ್ತಿದ್ದೇವೆ. ನಾಲ್ಕಾರು ದಶಕಗಳ ಹಿಂದೆ ಪರಿಸರದೊಂದಿಗೆ ಬದುಕು ಸಾಗಿಸುತ್ತಿದ್ದ ಜನಸಾಮಾನ್ಯರು ಯಾವುದೆ ರೋಗವಿಲ್ಲದೆ ಜೀವನ ಸಾಗಿಸಿದರು.

ಇತ್ತೀಚೆಗೆ ಭೂಮಿಗೆ ವಿಷ ಉಣಿಸಿ ಆಹಾರ ಬೆಳೆದು ಸೇವಿಸುತ್ತಿರುವುದರಿಂದ ನಮ್ಮ ಮುಂದಿನ ಪೀಳಿಗೆ ಆರೋಗ್ಯದಿಂದ ಬದುಕಲು ಪರಿಸರ ಉಳಿಸಬೇಕಾಗಿದೆ. ಪರಿಸರ ಉಳಿಯದಿದ್ದರೆ ಮುಂದಿನ ಪೀಳಿಗೆ ಆರೋಗ್ಯವಂತರಾಗಿ ಬದುಕು ಸಾಗಿಸಲು ಸಾಧ್ಯವಾಗುವುದಿಲ್ಲ. ಗಿಡಗಳನ್ನು ನೆಟ್ಟು ಪೋಷಿಸಬೇಕೆಂದು ರೈತರಿಗೆ ಮನವಿ ಮಾಡಿದರು.

ಇದೆ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಒಂದು ಸಸಿ ಎಂಬ ಸಂದೇಶದೊಂದಿಗೆ ಪರಿಸರವನ್ನು ಉಳಿಸಿ ಮುಂದಿನ ಪೀಳಿಗೆಗೆ ಉತ್ತಮ ಮತ್ತು ಆರೋಗ್ಯಕರ ಪರಿಸರವನ್ನು ನೀಡುವ ಸಂಕಲ್ಪ ಮಾಡಲಾಯಿತು. ಗ್ರಾಮದ ದೇವಸ್ಥಾನದ ಆವರಣದಲ್ಲಿ ಪಂಚವಟಿ ಗಿಡಗಳಾದ ಅರಳಿ, ಬೇವು, ಬನ್ನಿ, ಹತ್ತಿ, ಆಲ ಗಿಡಗಳನ್ನು ನೆಡಲಾಯಿತು.

## ಬಕ್ರವಳ್ಳಿ ಗ್ರಾಮದಲ್ಲಿ ಕಾಡಾನೆ ಪ್ರತ್ಯಕ್ಷ



ಬೇಲೂರು ತಾಲ್ಲೂಕು ಬಿಕ್ಕೋಡು ಹೋಬಳಿ ಬಕ್ರವಳ್ಳಿ ಗ್ರಾಮದಲ್ಲಿ ಒಂಟಿ ಕಾಡಾನೆ ಕಾಣಿಸಿಕೊಂಡ ಪರಿಣಾಮ ಕೆಲ ಕಾಲ ಆತಂಕದ ವಾತಾವರಣ ಸೃಷ್ಟಿಯಾಯಿತು. ಗ್ರಾಮದ ನಿವಾಸಿಗಳು ಆತಂಕದಿಂದಲೆ ಕಾಡಾನೆ ಸಂಚಾರವನ್ನು ಕುತೂಹಲದಿಂದಲೇ ವೀಕ್ಷಿಸಿದರು.

**IN THE COURT OF THE II ADDL. SENIOR CIVIL JUDGE & JMFC AT HASSAN**
R.A. No. 135/2024

**APPELLANT ::** Mr. Umesha
S/o Late Karigowda,
Aged about 44 years,
R/o Bhoovanahalli Village,
Kasaba Hobli, Hassan Taluk.

**V/s**

**RESPONDENT No.1** Mrs. Devamma,
W/o Keshavegowda,
Aged about 62 years.

**RESPONDENT No.2** Nagaraju
S/o Keshavegowda
Aged about 36 years.

**RESPONDENT No.3** Rangaswamy,
S/o Keshavegowda
Aged about 34 years.

**RESPONDENT No.4** Lakshmi
W/o Manjegowda
D/o Keshavegowda,
Aged about 32 years,

**Respondent No.1 to 4 are resident of:** Aduvalli Extension, Shankripuram, Hassan Town - 573 201.

**RESPONDENT No.9** Mrs. Radha
D/o Late Karigowda,
Aged about 39 years.

**RESPONDENT No.10** Mrs. Nagamma
D/o Late Karigowda,
Aged about 37 years.

**RESPONDENT No.11** Mrs. Vani
D/o Late Karigowda
Aged about 35 years.

**Respondent No. 9 to 11 are resident at:** Bhoovanahalli Village, Kasaba Hobli,

**APPEAL NOTICE TO THE RESPONDENT NO.1 TO 4, 9 TO 11.**

Take notice that the above mentioned case is filed by the Appellant to call for the entire records on the file of the Hon'ble VI Addl. Civil Judge & JMFC, Hassan in O.S. No.768/2017 and to set aside the judgment and decree passed in O.S. No.768/2017 on the file of the Hon'ble VI Addl. Civil Judge & JMFC, Hassan and dismissed the entire suit by allowing this appeal and to pass such other suitable orders as this Hon'ble Court deems fit to grant in the facts and circumstances of the case and in the interest of justice and equity. The suit is posted on 29/09/2026 at 11 A.M. for appearance of the Respondent No.1 to 4, 9 to 11. The above said Respondents are hereby directed to appear before this Hon'ble Court on the above date either personally or through their respective counsel failing which the appeal will be prosecuted by placing the Respondent No.1 to 4, 9 to 11 Ex-parte.

Objections if any shall be filed by the Respondent No.1 to 4, 9 to 11 within 30 days from publication of this notice.

**UNDER THE ORDERS OF THE COURT.**

Given under my hand and seal of this Court on 02/09/2026.

Advocates for Plaintiff
Mohammed Jaffar,
Advocate,
Channambika Complex,
2nd Floor, Sampige Road,
Hassan - 573 201
Date: 02-09-2026

Shirastedar Court of
prl. Senior Civil Judge &
CJM at Hassan.

## ಆಹಾರ ತಯಾರಿಕೆಯಲ್ಲಿ ಕೃತಕ ಬಣ್ಣಗಳ ಬಳಕೆ ತಡೆಗೆ ಸೂಚನೆ

• ಪ್ರಜೋದಯ ವರದಿ

**ಹಾಸನ:** ಸಾರ್ವಜನಿಕರ ಆರೋಗ್ಯ ಸುರಕ್ಷತೆ ದೃಷ್ಟಿಯಿಂದ ಆಹಾರ ತಯಾರಿಕೆಯಲ್ಲಿ ಕೃತಕ ಬಣ್ಣಗಳ ಬಳಕೆ ಹಾಗೂ ರುಚಿಗೆ ಬಳಸುವ ಪದಾರ್ಥಗಳನ್ನು ಬಳಸುವದನ್ನು ತಡೆಯುವ ಮೂಲಕ ಗುಣಮಟ್ಟದ ಆಹಾರವನ್ನು ಒದಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಆಹಾರ ಸುರಕ್ಷತೆ ಕುರಿತು ವಿಡಿಯೋ ಸಂವಾದದ ಮೂಲಕ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಆಹಾರ ತಯಾರಿಕೆಯಲ್ಲಿ ಕೃತಕ ಬಣ್ಣಗಳ ಬಳಕೆ ಮಾಡುವುದರಿಂದ ಕ್ಯಾನ್ಸರ್‌ನಂತಹ ರೋಗಗಳು ಕಂಡು ಬರುತ್ತಿವೆ, ಆಹಾರ ತಯಾರಿಕೆಯಲ್ಲಿ ಕೃತಕ ಬಣ್ಣಗಳ ಬಳಕೆಯನ್ನು ಕಡ್ಡಾವಾಗಿ ತಡೆಯುವಂತೆ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಹೋಟೆಲ್, ಹೋಂ ಸ್ಟೆ, ರೆಸಾರ್ಟ್ ಗಳಲ್ಲಿ ಅಡಿಗೆ ತಯಾರಿಸುವ ಸಿಬ್ಬಂದಿಗಳಿಗೆ ಅಗತ್ಯ ತರಬೇತಿ ನೀಡಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಆಹಾರಕ್ಕೆ ಸಂಬಂದಿಸಿದಂತೆ ಯಾವುದೇ ನ್ಯೂನ್ಯತೆಗಳು ಕಂಡು ಬಂದರೆ ಗ್ರಾಹಕರು ದೂರು ಸಲ್ಲಿಸಲು ನೆರವಾಗುವಂತೆ ಸೌಲಭ್ಯ ಕಲ್ಪಿಸುವಂತೆ ತಿಳಿಸಿದರು.

ತಾಲ್ಲೂಕುವಾರು ತಂಡ ರಚಿಸಿ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ಅವಧಿ ಮೀರಿದ ಆಹಾರ ಪದಾರ್ಥಗಳನ್ನು ನಾಗರಿಕರಿಗೆ ನೀಡುವುದನ್ನು ತಡೆಗಟ್ಟಬೇಕು ಈ ನಿಟ್ಟಿನಲ್ಲಿ ಜನರಲ್ಲಿ ಜಾಗೃತಿ ಮೂಡಿಸುವಂತೆ ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣ ಮೂರ್ತಿ, ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

### ಸಫಲವಾಗದ ಖಾತೆದಾರರು, ವರ್ತಕರೊಂದಿಗೆ ಚರ್ಚೆ: ಎಸಿ ಹುಲ್ಲುಮನಿ ತಿಮ್ಮಣ್ಣ

## ತೇಜಸ್ವಿ ವೃತ್ತ ಅಗಲೀಕರಣ: ಶೀಘ್ರವೇ ಮತ್ತೊಂದು ಸಭೆ

• ಪ್ರಜೋದಯ ವರದಿ



**ಸಕಲೇಶಪುರ:** ತೇಜಸ್ವಿ ವೃತ್ತದ ಅಗಲೀಕರಣಕ್ಕೆ ಸಂಬಂಧಿಸಿದಂತೆ ಖಾತೆದಾರರು ಹಾಗೂ ವರ್ತಕರೊಂದಿಗೆ ನಡೆದ ಸಭೆಯಲ್ಲಿ ಒಮ್ಮತ ಮೂಡದ ಹಿನ್ನೆಲೆಯಲ್ಲಿ ಶೀಘ್ರದಲ್ಲೇ ಮತ್ತೊಂದು ಸುತ್ತಿನ ಸಭೆ ನಡೆಸಲು ನಿರ್ಧರಿಸಿ ಖಾತೆದಾರರು ಹಾಗೂ ವರ್ತಕರ ಅಭಿಪ್ರಾಯ ಮತ್ತು ದಾಖಲೆಗಳನ್ನು ಪರಿಗಣಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಅವರು ತಿಳಿಸಿದರು

ಪಟ್ಟಣದ ಪುರಭವನದಲ್ಲಿ ಪುರಸಭೆ ಆಡಳಿತದ ವತಿಯಿಂದ ಆಯೋಜಿಸಿದ್ದ ತೇಜಸ್ವಿ ವೃತ್ತದ ವರ್ತಕರು, ಖಾತೆದಾರರು ಹಾಗೂ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಪಟ್ಟಣದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆ, ಅಸಮರ್ಪಕ ಪಾರ್ಕಿಂಗ್ ಹಾಗೂ ಕಿರಿದಾದ ರಸ್ತೆಗಳಿಂದ ಸಾರ್ವಜನಿಕ ರಿಗೆ ತೊಂದರೆಯಾಗುತ್ತಿದೆ. ತೇಜಸ್ವಿ ವೃತ್ತದ ಸುತ್ತಮುತ್ತ ಪದೇಪದೇ ಅಪಘಾತಗಳು ಸಂಭವಿಸುತ್ತಿದ್ದು, ಪೀಕ್ ಅವಧಿಯಲ್ಲಿ ವಾಹನ ದಟ್ಟಣೆಯಿಂದಾಗಿ ಗಂಟೆಗಟ್ಟಲೆ ಸಂಚಾರ ಅಸ್ತವ್ಯಸ್ತವಾಗುತ್ತಿದೆ ಎಂದು ವಿಷಾದಿಸಿದರು.

ಸಕಲೇಶಪುರ ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾಗಿರುವುದರಿಂದ ರಾಜ್ಯದ ವಿವಿಧ ಭಾಗಗಳಿಂದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಬೇಲೂರು–ಸಕಲೇಶಪುರ ಮಾರ್ಗದಲ್ಲಿ ಪ್ರವಾಸಿಗರ ವಾಹನಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತೇಜಸ್ವಿ ವೃತ್ತದ ಬಳಿ ಸಂಚಾರ ದಟ್ಟಣೆ ಮತ್ತಷ್ಟು ಹೆಚ್ಚಾಗಿದೆ. ಸಾರ್ವಜನಿಕರು, ಪ್ರವಾಸಿಗರು ಹಾಗೂ ಮುಂದಿನ ಪೀಳಿಗೆಗೆ ಅನುಕೂಲವಾಗುವಂತೆ ರಸ್ತೆ ಹಾಗೂ ವೃತ್ತವನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದು ಹೇಳಿದರು.

ವೃತ್ತದ ಅಗಲೀಕರಣದ ಕುರಿತು ಚರ್ಚಿಸಲು ಸಭೆ ಕರೆಯಲಾಗಿದ್ದು, ಈವರೆಗೆ ಯಾವುದೇ ಅಂತಿಮ ತೀರ್ಮಾನ ಕೈಗೊಂಡಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಪುರಸಭೆಗೆ ಸೇರಿದ ಜಾಗವನ್ನು ಅತಿಕ್ರಮಿಸಿಕೊಂಡಿರುವವರ ತೆರವು ಕಾರ್ಯ ನಡೆಯುತ್ತಿದೆ. ನೈಜ ಖಾತೆದಾರರು ಇದ್ದಲ್ಲಿ ಅವರ ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದರು. ಅಸಮರ್ಪಕ ಪಾರ್ಕಿಂಗ್ ನಿಯಂತ್ರಿಸಲು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಯೋಜನ ಪ್ರಾಧಿಕಾರದ ಅಧ್ಯಕ್ಷ ಸೈಯದ್ ಮುಫೀಜ್ ಮಾತನಾಡಿ, ಕಳೆದ ತಿಂಗಳು ಜಿಲ್ಲಾಧಿಕಾರಿಗಳು ಪಟ್ಟಣಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ತೇಜಸ್ವಿ ವೃತ್ತದ ಸಮೀಪದ ಸ್ಥಳ ಕಿರಿದಾಗಿರುವುದು ಹಾಗೂ ವಾಹನ ಸಂಚಾರಕ್ಕೆ ಉಂಟಾಗುತ್ತಿರುವ ತೊಂದರೆ ಗಮನಕ್ಕೆ ಬಂದಿತ್ತು. ವರ್ಷಗಳಿಂದ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದ್ದು, ಪ್ರವಾಸಿಗರ ವಾಹನ ದಟ್ಟಣೆಯಿಂದ ರಸ್ತೆ ಸಂಚಾರ ಗಂಟೆಗಟ್ಟಲೆ ಜಾಮ್ ಆಗುತ್ತಿದೆ. ಈ ಹಿನ್ನೆಲೆಯಲ್ಲಿ ತೇಜಸ್ವಿ ಚಿತ್ರಮಂದಿರದ ಸಮೀಪ ಹೊಸ ವೃತ್ತ ನಿರ್ಮಿಸಿ ರಸ್ತೆ ಅಗಲೀಕರಣ ಮಾಡುವ ಉದ್ದೇಶದಿಂದ ಸಭೆ ನಡೆಸಲಾಗಿದೆ. ಪಟ್ಟಣದ ಅಭಿವೃದ್ಧಿಯ ಹಿತದೃಷ್ಟಿಯಿಂದ ಖಾತೆದಾರರು ಹಾಗೂ ಜಮೀನು ಮಾಲೀಕರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಖಾತೆದಾರರು ಹಾಗೂ ವರ್ತಕರು ತಮ್ಮ ಜಾಗ, ಕಟ್ಟಡ ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ ವಿವಿಧ ವಿಚಾರಗಳನ್ನು ಅಧಿಕಾರಿಗಳ ಗಮನಕ್ಕೆ ತಂದರು. ಎಲ್ಲರ ಅಭಿಪ್ರಾಯ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲು ಮತ್ತೊಂದು ಸುತ್ತಿನ ಸಭೆ ನಡೆಸಲು ಅಧಿಕಾರಿಗಳು ನಿರ್ಧರಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ಯೋಜನಾ ಪ್ರಾಧಿಕಾರದ ಸದಸ್ಯರಾದ ದೇವರಾಜ್, ಚರಣ್, ವಿಜಯಕುಮಾರ್, ವರ್ತಕರ ಸಂಘದ ಅಧ್ಯಕ್ಷ ಮಧು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ನೇಪಾಳ ದುರಂತ: ನಾಪತ್ತೆಯಾದ ಸಾವಿರಾರು ಶವಗಳು

## ದು:ಖಿಸಲು ಸ್ವಂತ ಮನೆಗಳೂ ಇಲ್ಲ। ಹೇಳತೀರದ ಸಂದಿಗ್ದ ಸ್ಥಿತಿಯಲ್ಲಿ ರಾಷ್ಟ್ರ

• ಪ್ರಜೋದಯ ವರದಿ

**ಕಠ್ಮಂಡು:** ನೇಪಾಳ-ಟಿಬೆಟ್ ಗಡಿ ಪ್ರದೇಶದಲ್ಲಿ ಆ.26ರಂದು ಹಿಮಕುಸಿತವಾಗಿ ಉಂಟಾದ ದಿಢೀರ್ ಪ್ರವಾಹ ದಿಂದಾಗಿ ಇದುವರೆಗೆ ಮೃತಪಟ್ಟವರ ಸಂಖ್ಯೆ 1,252ಕ್ಕೆ ಏರಿಕೆಯಾಗಿದೆ.

ಸಂತ್ರಸ್ತ ಪ್ರದೇಶದಲ್ಲಿ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದ ಹಲವು ಶವಗಳನ್ನು ಗುರುವಾರವೂ ಹೊರತೆಗೆಯಲಾ ಗಿದೆ. ದುರಂತ ಸಂಭವಿಸಿ ಒಂದು ವಾರ ಕಳೆದರೂ, ನಾಪತ್ತೆಯಾಗಿರುವ ಸಾವಿರಾರು ಜನರ ಸುಳಿವು ಸಿಕ್ಕಿಲ್ಲವೆಂದು ಪೊಲೀಸರು ತಿಳಿಸಿದ್ದಾರೆ. ಚಿತವಾನ್ ಜಿಲ್ಲೆಯಲ್ಲಿ 355, ನವಲ್ಪರಸಿ ಪೂರ್ವ ಜಿಲ್ಲೆಯಲ್ಲಿ 218, ಭಾರತ ಗಡಿಯಲ್ಲಿ ಸಿಕ್ಕ 18 ಶವಗಳೂ ಸೇರಿ ನವಲ್ಪರಸಿ ಪಶ್ಚಿಮ ಜಿಲ್ಲೆಯಲ್ಲಿ 208, ನುವಾಕೊಟ್‌ನಲ್ಲಿ177, ರಸುವಾ 127, ಗೊರ್ಖಾ 69, ಧಾಡಿಂಗ್ 60, ತಹಾನು ಜಿಲ್ಲೆಯಲ್ಲಿ 38 ಶವಗಳನ್ನು ಅವಶೇಷಗಳ ಅಡಿಯಿಂದ ಹೊರತೆಗೆಯಲಾಗಿದೆ. ಸೇನೆ ನೇತೃತ್ವದಲ್ಲಿ 9ನೇ ದಿನವೂ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ಸುಮಾರು 4,875 ಜನರು ನಾಪತ್ತೆಯಾಗಿದ್ದಾರೆಂದು ಅಂದಾಜಿಸಲಾಗಿದೆ.

**ಸಾಂಕೇತಿಕ ಅಂತ್ಯಕ್ರಿಯೆಗೆ ಮುಂದು**

ನಾಪತ್ತೆಯಾದ ತಮ್ಮವರನ್ನು ಹುಡುಕುವ ಭರವಸೆ ಕ್ಷೀಣಿಸುತ್ತಿದ್ದಂತೆ ಕುಟುಂಬಸ್ಥರು ಸಾಂಕೇತಿಕವಾಗಿ ಅಂತಿಮ ಸಂಸ್ಕಾರ ನೆರವೇರಿಸಲು ಮುಂದಾಗಿದ್ದಾರೆ. ಕುಟುಂಬಗಳು ಸಾಂಪ್ರದಾಯಿಕ ದರ್ಭೆ ಹುಲ್ಲಿನ ಪ್ರತಿಕೃತಿಗಳನ್ನು ಬಳಸಿ ಅಂತಿಮ ಸಂಸ್ಕಾರ ನೆರವೇರಿಸುತ್ತಿವೆ. ಇನ್ನು ಹಲವರಿಗೆ ದುಃಖಿಸಲು ಸ್ವಂತ ಮನೆಗಳೂ



ಉಳಿದಿಲ್ಲ. ಆಗಸ್ಟ್ 26ರಂದು ನೇಪಾಳದ ಭೋಟೆ ಕೋಶಿ ಮತ್ತು ತ್ರಿಶೂಲಿ ನದಿಯ ದಡದಲ್ಲಿರುವ ಗ್ರಾಮ ಹಾಗು ಪಟ್ಟಣಗಳ ಮೇಲೆ ಸುನಾಮಿ ಯಂತೆ ಅಪ್ಪಳಿಸಿದ ಕೆಸರು ಮಿಶ್ರಿತ ನೀರು ಹಲವಾರು ಕಟ್ಟಡ, ಮನೆಗಳನ್ನು ನುಂಗಿ ಹಾಕಿದೆ. ಜೊತೆಗೆ ಹಠಾತ್ ಪ್ರವಾಹ ದಿಂದಾಗಿ ಸಾವಿರಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಸಾವಿರಾರು ಜನರು ನಾಪತ್ತೆಯಾಗಿದ್ದಾರೆ.

ರಸುವಾ ಜಿಲ್ಲೆಯ ಪಹಾರೇಬೇಸಿ ಗ್ರಾಮದಲ್ಲಿ ಎಂಟು ದಿನಗಳಿಂದ ನಾಪತ್ತೆಯಾಗಿರುವ ಸಂಬಂಧಿಕರ ಬಗ್ಗೆ ಯಾವುದೇ ಮಾಹಿತಿ ಸಿಗದ ಕಾರಣ ನಿವಾಸಿಗಳು ಅಂತಿಮ ಸಂಸ್ಕಾರಕ್ಕೆ ಸಿದ್ಧತೆ ನಡೆಸುತ್ತಿದ್ದಾರೆಂದು ವರದಿಯಾಗಿದೆ. ಆದಾಗ್ಯೂ, ಅನೇಕ ಕುಟುಂಬಗಳಿಗೆ ಆಶ್ರಯ ಮತ್ತು ವಿಧಿವಿಧಾನಗಳನ್ನು ನಡೆಸಲು ಪುರೋಹಿ ತರ ಕೊರತೆ ಇರುವುದರಿಂದ ಆಚರಣೆಗಳನ್ನು ಮಾಡುವುದಕ್ಕೂ ಕಷ್ಟಕರವಾಗಿದೆಂದು ವರದಿ ತಿಳಿಸಿದೆ.

ನಾಪತ್ತೆಯಾದವರ ಮೃತದೇಹಗಳು ಸಿಗುವ ಭರವಸೆ ಕ್ಷೀಣಿಸುತ್ತಿರುವುದು ಮತ್ತು ಮೃತದೇಹಗಳನ್ನು ಗುರುತಿ ಸುವಿಕೆ ದಿನದಿಂದ ದಿನಕ್ಕೆ ಕಷ್ಟಕರವಾಗುತ್ತಿರುವುದರಿಂದ ನಾವು ಸಂಕೇತಿಕವಾಗಿ ಅಂತ್ಯಕ್ರಿಯೆ ನೆರವೇರಿಸಲು ಮುಂದಾಗಿದ್ದೇವೆಂದು ಸಂತ್ರಸ್ತರೊಬ್ಬರು ಹೇಳಿದ್ದಾರೆ. ನಾಪತ್ತೆಯಾದವರು ಜೀವಂತವಾಗಿ ಬದುಕಿ ಬರುವ ಸಾಧ್ಯತೆಯಿಲ್ಲ ಎಂದು ಭಾವಿಸಿರುವ ಹಲವರು ಕುಟುಂಬಗಳು ಅಂತಿಮ ಸಂಸ್ಕಾರ ನಡೆಸುವ ಪ್ರಕ್ರಿಯೆ ಪ್ರಾರಂಭಿಸಿವೆಂದು ಉತ್ತರ ಗಯಾ ಗ್ರಾಮೀಣ ಪುರಸಭೆಯ ಅಧ್ಯಕ್ಷ ಮಾಧವ್ ಪ್ರಸಾದ್ ಆರ್ಯಾಲ್ ತಿಳಿಸಿದ್ದಾರೆ.

ಹಳೆಯ ವಸತಿ ಪ್ರದೇಶದ ಕುರುಹುಗಳೇ ಉಳಿದಿಲ್ಲ. ಶೋಕಾಚರಣೆಯ ನಿಯಮಗಳನ್ನು ಪಾಲಿಸಲು ಎಲ್ಲರೂ ಒಟ್ಟಿಗೆ ಇರಲು ಸಾಧ್ಯವಾಗುತ್ತಿಲ್ಲ ಎಂದು ಉಪಾಧ್ಯಕ್ಷೆ ಚಮೇಲಿ ಗುರುಂಗ್ ಹೇಳಿದ್ದಾರೆ. ಪ್ರವಾಹ ಪೀಡಿತ ಪ್ರದೇಶ ಗಳಲ್ಲಿ ಕಣ್ಮರೆಯಾದವರು ಜೀವಂತವಾಗಿ ಸಿಗುವ ಭರವಸೆ ಕ್ಷೀಣಿಸುತ್ತಿರುವ ನಡುವೆ ಅವರ ಅಂತಿಮ ಸಂಸ್ಕಾರ ನೆರವೇರಿಸಲು ಕುಟುಂಬ ದವರು ದರ್ಭೆ ಹುಲ್ಲಿನಿಂದ ಮಾಡಿದ ಪ್ರತಿಕೃತಿ ಗಳನ್ನು ಬಳಸಲು ಆರಂಭಿಸಿದ್ದಾರೆ.

ವಿಧಿ ವಿಧಾನಗಳನ್ನು ಪೂರೈಸುವ ಸಲುವಾಗಿ ಹಲವು ಕುಟುಂಬಗಳು ಈಗಾಗಲೇ ಕಠ್ಮಂಡುವಿನಲ್ಲಿ ಬೀಡು ಬಿಟ್ಟಿವೆ. ತಾರಕೇಶ್ವರದ ರುದ್ರಮತಿ ಮಹಾದೇವ ದೇವಸ್ಥಾನದ ಕ್ರಿಯಾಪುತ್ರಿ ಭವನದಲ್ಲಿ ಎಂಟು ಕುಟುಂಬಗಳು ತಂಗಿವೆ. ಪ್ರತಿಯೊಂದು ಕುಟುಂಬವು ಪ್ರವಾಹದಲ್ಲಿ ಮೂರರಿಂದ ಐದು ಕುಟುಂಬದ ಸದಸ್ಯರನ್ನು ಕಳೆದುಕೊಂಡಿದೆ ಎಂದು ಹೇಳಲಾಗಿದೆ. ಗುಪ್ತೇಶ್ವರ ಮಹಾದೇವ ದೇವಸ್ಥಾನದ ಕ್ರಿಯಾಪುತ್ರಿ ಭವನದ ಎಲ್ಲಾ ಕೊಠಡಿಗಳು ಭರ್ತಿಯಾಗಿದ್ದು, ನಿರ್ವಹಣಾ ಮಂಡಳಿಯು ಹೆಚ್ಚುವರಿಯಾಗಿ ಆರು ಕೊಠಡಿಗಳನ್ನು ನಿರ್ಮಿಸಿದೆ.

ಕ್ರಿಯಾಪುತ್ರಿ ಭವನ ಎಂಬುದು ಹಿಂದೂ ಧರ್ಮದವರನ್ನು ಅಗಲಿದ ಕುಟುಂಬದ ಸದಸ್ಯರಿಗಾಗಿ ಕಡ್ಡಾಯವಾಗಿ ಮಾಡುವ 13 ದಿನಗಳ ವಿಧಿವಿಧಾನಗಳನ್ನು ನೆರವೇರಿಸಲು ತಂಗುವ ಆಶ್ರಯ ತಾಣವಾಗಿದೆ. ಕೆಲವು ಕುಟುಂಬಗಳು ಮೃತದೇಹಗಳನ್ನು ಪತ್ತೆಹಚ್ಚಿ ಅಂತ್ಯಕ್ರಿಯೆ ನೆರವೇರಿಸಿದ ಬಳಿಕವೂ ಕಠ್ಮಂಡುವಿಗೆ ವಾಪಾಸ್ ಆಗಬೇಕಾಯಿತು.



**ಹಾಸನ: ಜಿಲ್ಲೆಯ ಎಲ್ಲಾ ಪತ್ರಕರ್ತರು ಹಾಗು ಕುಟುಂಬಸ್ಥರಿಗೆ ಆರೋಗ್ಯ ಉಚಿತ ಸೇವೆ ಹಾಗು ಅಗತ್ಯ ವೈದ್ಯಕೀಯ ಸೇವೆಗಳನ್ನು ಪಡೆದುಕೊಳ್ಳುವ ಸಲುವಾಗಿ ಆರೋಗ್ಯ ಕಾರ್ಡ್ ಸೌಲಭ್ಯ ಕಲ್ಪಿಸುವಂತೆ ಚಿಕ್ಕಬಳ್ಳಾಪುರ ಜಿಲ್ಲೆ ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದ ಶ್ರೀ ಮಧುಸೂದನ್ ಅವರಿಗೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಮನವಿ ಸಲ್ಲಿಸಲಾಯಿತು. ಕಾರ್ಯಕ್ರಮ ನಿಮಿತ್ತ ಇತ್ತೀಚೆಗೆ ನಗರಕ್ಕೆ ಭೇಟಿ ನೀಡಿದ್ದ ಅವರನ್ನು ಸಂಘದ ಪದಾಧಿ ಕಾರಿಗಳು ಭೇಟಿ ಮಾಡಿದರು.**

**ಕೆಯೂಡಬ್ಲ್ಯೂಜೆ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆಪಿಎಸ್ ಪ್ರಮೋದ್, ಜಿಲ್ಲಾ ಉಪಾಧ್ಯಕ್ಷ ರಾದ ಎನ್.ನಂಜುಂಡೇಗೌಡ, ಜಿ.ಪ್ರಕಾಶ್, ಕಾರ್ಯದರ್ಶಿ ಕೆ.ಎಂ.ಹರೀಶ್, ಖಜಾಂಚಿ ತ್ಯಾಗರಾಜ್, ಕೆ.ಬಿ.ಮಂಜುನಾಥ್ ಮತ್ತಿತರರಿದ್ದರು.**

## 5 ತಾಲ್ಲೂಕಿಗೆ 321 ಕೋ.ರೂ. ಬರ ಪರಿಹಾರಕ್ಕೆ ಶಿಫಾರಸ್ಸು

» ಮೊದಲನೇ ಪುಟದಿಂದ

ಬರಪೀಡಿತ ತಾಲ್ಲೂಕುಗಳ ಘೋಷಣೆಯಿಂದ ರೈತರಿಗೆ ಸರ್ಕಾರದ ನಿಯಮಾನುಸಾರ ಬರ ಪರಿಹಾರ ಹಾಗು ವಿಮಾ ಸೌಲಭ್ಯಗಳು ದೊರೆಯುವ ನಿರೀಕ್ಷೆ ಮೂಡಿದೆ. ಇದೀಗ ಸರ್ಕಾರದ ಮಟ್ಟದಲ್ಲಿ ಪರಿ ಹಾರದ ಪ್ರಸ್ತಾವನೆಗೆ ಅನುಮೋದನೆ ದೊರೆಯಬೇಕಿದೆ. ಜಿಲ್ಲೆಯ ಐದು ತಾಲ್ಲೂಕುಗಳು ಬರದ ಹೊಡೆತಕ್ಕೆ ಸಿಲುಕಿದ್ದು, ಸಾವಿರಾರು ರೈತ ಕುಟುಂಬಗಳ ನಿರೀಕ್ಷೆ ಇದೀಗ ಸರ್ಕಾರದ ಪರಿಹಾರದತ್ತ ನೆಟ್ಟಿದೆ.

**ಆಲೂರು, ಬೇಲೂರಿನಲ್ಲೂ ಬರ**

ಆಲೂರು, ಬೇಲೂರು ತಾಲ್ಲೂಕಿ ನಲ್ಲಿ ಬರ ಪರಿಸ್ಥಿತಿ ಇದ್ದರೂ ಅರೆ ಮಲೆನಾಡು ಭಾಗವಾಗಿರುವ ಈ ಎರಡು ತಾಲ್ಲೂಕನ್ನು ಬರಪೀಡಿತ ಪಟ್ಟಿಯಿಂದ ಕೈಬಿಟ್ಟಿರುವುದು ಈ ಭಾಗದ ರೈತರ ಅಸಮಾಧಾನಕ್ಕೆ ಕಾರಣವಾಗಿದೆ. ಹೀಗಾಗಿ ಬರಪೀಡಿತ ತಾಲ್ಲೂಕುಗಳ ಘೋಷಣೆಯ 2ನೇ ಪಟ್ಟಿಯಲ್ಲಿ ಈ ಎರಡು ತಾಲ್ಲೂಕು ಗಳನ್ನು ಸೇರಿಸಬೇಕೆಂದು ಒತ್ತಾಯಿಸಲಾಗಿದ್ದು, 2ನೇ ಪಟ್ಟಿಯಲ್ಲಿ ಸೇರ್ಪಡೆಯಾಗುವು ನಿರೀಕ್ಷೆ ಇದೆ.

## ಡಾ।। ಹೆಬ್ಬಾರ್ ಅವರಿಂದ ಇತಿಹಾಸ ಸ್ಮರಿಸುವ ಕೆಲಸಗಳಾಗಿವೆ

» ಮೊದಲನೇ ಪುಟದಿಂದ

ವಸ್ತುಗಳನ್ನಿಡಲು ಕೀ ಲಾಕರ್ ವ್ಯವಸ್ಥೆ ಮಾಡಲಾಗಿದೆ. ಹೆಬ್ಬಾರ್ ಅವರ ಆದರ್ಶ ಗುಣಗಳನ್ನು ನಾವೆಲ್ಲರೂ ಪಾಲಿಸಬೇಕೆಂದರು.

ಜಿಲ್ಲಾ ರೆಡ್ ಕ್ರಾಸ್ ಸಭಾಪತಿ ಮತ್ತು ಡಾ।। ಗುರುರಾಜ್ ಹೆಬ್ಬಾರ್ ಅಭಿನಂದನಾ ಸಮಿತಿ ಅಧ್ಯಕ್ಷ ಹೆಚ್.ಪಿ.ಮೋಹನ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಡಾ।। ಗುರುರಾಜ್ ಹೆಬ್ಬಾರ್ ಅವರಿಗೆ ಇದ್ದ ದೂರದೃಷ್ಟಿ ಯಾರಿಗೂ ಇಲ್ಲ. ಜನ ಸೇವೆಯೇ ಜನಾರ್ದನ ಸೇವೆ ಎಂಬ ತತ್ವಕ್ಕೆ ಬದ್ಧರಾಗಿದ್ದರು. ಹೆಬ್ಬಾರ್ ಅವರು ಅನೇಕ ಸಮಾಜಮುಖಿ ಕಾರ್ಯಕ್ರಮಗಳಾದ ಜಿಲ್ಲಾ ರೆಡ್ ಕ್ರಾಸ್ ಸಂಸ್ಥೆ, ಸಂಜೀವಿನಿ ಸಹಕಾರಿ ಆಸ್ಪತ್ರೆ, ಚೈತನ್ಯ ಮಂದಿರ, ಕಾಮಧೇನು ಸಹಕಾರಿ ವಿದ್ಯಾಶ್ರಮ, ರೈತ ಬಂಧು ಸಹಕಾರ ಸಂಘಗಳ ನೇತೃತ್ವ ವಹಿಸಿದ್ದರು. ಇಂತಹವರು ನಮ್ಮ ಜೊತೆ ಇದ್ದಿದ್ದೇ ನಮ್ಮ ಪುಣ್ಯವೆಂದರು.

ಜನಪ್ರಿಯ ಆಸ್ಪತ್ರೆ ಮತ್ತು ಸಮೂಹ ಸಂಸ್ಥೆಗಳ ಮುಖ್ಯಸ್ಥ ಡಾ।। ಎ.ಕೆ. ಅಬ್ದುಲ್ ಬಶೀರ್ ಅವರು ಮಾತನಾಡಿ, 1996ರಲ್ಲಿ ಹಾಸನದಲ್ಲೇ ಡಿಪ್ಲೋಮಾ ಪದವಿ ಮುಗಿಸಿದ ನಾನು ಇಲ್ಲೇ ನೆಲೆಸಲು ಮುಖ್ಯ ಕಾರಣ ನನ್ನ ಗುರುಗಳಾದ ಡಾ।। ಗುರುರಾಜ ಹೆಬ್ಬಾರ್. ಅವರನ್ನು ಭೇಟಿ ಮಾಡಲು ಯಾರೇ ಹೋದರು ಪ್ರೀತಿ, ಕಾಳಜಿ ತೋರುತ್ತಿದ್ದರು. ಅವರ ಸ್ನೇಹ ಬೆಳೆದ ಬಳಿಕ ಸಂಜೀವಿನಿ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅವಕಾಶ ಕೇಳಿದೆ. ಅದಕ್ಕೆ ಒಪ್ಪಿದ ಹಿರಿಯರು ಮರುದಿನವೇ ನನಗೆ ಅಪಾಯಿಂಟ್‌ಮೆಂಟ್ ಲೆಟರ್ ಕೊಡಿಸಿದರು. 1 ವರ್ಷ ಸಂಜೀವಿನಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕೆಎಂಸಿ ಮಣಿಪಾಲ್‌ಗೆ ಹೋಗಿದ್ದೆ. ಅದಾದ ಮೇಲೆ ಪ್ರತಿ ಹಂತದಲ್ಲೂ ಅವರು ನನಗೆ ಬೆಂಬಲವಾಗಿ ನಿಂತು ಬೆಳೆಸಿದರು. ಅವರ ಬಗ್ಗೆ ಎಷ್ಟು ಹೇಳಿದರೂ ಸಾಲದು ಎಂದು ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಪ್ರತಿಭಾ ರಾಘವೇಂದ್ರ, ಡಾ।। ಕಾವ್ಯಶ್ರೀ, ಹಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ।। ರಾಘವೇಂದ್ರ ಪ್ರಸಾದ್, ಪ್ರಾಂಶುಪಾಲರಾದ ಡಾ.ಕವಿತಾ, ಡಾ।। ಪ್ರವೀಣ್, ಡಾ।। ಮನುಪ್ರಕಾಶ್, ಹಿಮ್ಸ್ ಆಸ್ಪತ್ರೆ ಡಾ।। ಪ್ರಕಾಶ್, ನಿಶ್ಚಿತ ಕುಮಾರಿ, ಮುತ್ತತ್ತಿ ರಾಜಣ್ಣ, ಮಹಾವೀರ್ ಬನ್ಸಾಲಿ, ಚಂದ್ರಶೇಖರ್, ಶಬೀರ್ ಅಹಮದ್ ಮತ್ತು ಕಾಲೇಜು ಸಿಬ್ಬಂದಿ ಇದ್ದರು.

# ಒಂದು ಛಾಯಾಚಿತ್ರ ಸಾವಿರ ಪದಗಳಿಗೆ ಸಮ

• ಪ್ರಜೋದಯ ವರದಿ

**ಹಾಸನ:** ಒಂದು ಛಾಯಾಚಿತ್ರ ಸಾವಿರ ಪದಗಳಿಗೆ ಸಮ ಎಂಬ ಮಾತಿದೆ. ಅದು ಸಾವಿರಾರು ಅರ್ಥ ನೀಡುವುದರ ಜೊತೆಗೆ, ಅನೇಕ ಕಥೆ ಹೇಳುವ ಶಕ್ತಿಯನ್ನು ಹೊಂದಿದೆ. ಕ್ಷಣಿಕ ಘಟನೆಗಳನ್ನು ಶಾಶ್ವತವಾಗಿ ನೆನಪಿನಲ್ಲಿ ಉಳಿಸುವ ಅಪೂರ್ವ ಕಾರ್ಯವನ್ನು ಛಾಯಾಗ್ರಾಹಕರು ಮಾಡುತ್ತಿದ್ದಾರೆಂದು ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಹೇಳಿದರು.



ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲ್ಲೂಕು ಛಾಯಾಗ್ರಾಹಕರ ಸಂಘದಿಂದ ಗುರುವಾರ ಆಯೋಜಿಸಿದ್ದ 187ನೇ ವಿಶ್ವ ಛಾಯಾಗ್ರಹಣ ದಿನಾಚರಣೆ, ಸನ್ಮಾನ ಹಾಗು ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕಪ್ಪು- ಬಿಳುಪು ಛಾಯಾಗ್ರಹಣದಿಂದ ಆರಂಭ ಗೊಂಡು ಇಂದಿನ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ತಂತ್ರಜ್ಞಾನವರೆಗೆ ಛಾಯಾಗ್ರಹಣ ಕ್ಷೇತ್ರ ಸಾಕಷ್ಟು ಬದಲಾವಣೆ ಕಂಡಿದೆ. ಇಂದು ಮೊಬೈಲ್ ಹೊಂದಿರುವ ಪ್ರತಿಯೊಬ್ಬರೂ ಚಿತ್ರ ತೆಗೆಯಬಹುದಾದರೂ, ಕೇವಲ ಕ್ಯಾಮರಾ ಹೊಂದಿದಾಕ್ಷಣ ವೃತ್ತಿಪರ ಛಾಯಾಗ್ರಾಹಕರಾ ಗಲು ಸಾಧ್ಯವಿಲ್ಲ. ಚಿತ್ರಕ್ಕೆ ಸೂಕ್ತ ದೃಷ್ಟಿಕೋನ, ಚಿಂತನೆ ಮತ್ತು ಸೃಜನಶೀಲತೆ ನೀಡುವ ಸಾಮರ್ಥ್ಯ ವೃತ್ತಿಪರ ಛಾಯಾಗ್ರಾಹಕರಿಗಿದೆ ಎಂದರು.

ಯಾವುದೇ ಕಾರ್ಯಕ್ರಮ ಅಥವಾ ಘಟನೆ ನಡೆದಾಗ ನಾವು ತಡವಾಗಿ ಸ್ಥಳಕ್ಕೆ ತೆರಳಿದರೆ ಆ ಕ್ಷಣವನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ. ಅದನ್ನೇ ಕ್ಯಾಮೆರಾದಲ್ಲಿ ಸೆರೆ ಹಿಡಿದು ಶಾಶ್ವತ ನೆನಪಾಗಿ ಉಳಿಸುವವರು ಛಾಯಾಗ್ರಾಹಕರು. ಸಮಾಜದ ಆಗು ಹೋಗುಗಳಿಗೆ ಸಾಕ್ಷಿಯಾಗುವುದರ ಜೊತೆಗೆ ಒಂದು ಉತ್ತಮ ಚಿತ್ರ ಸಮಾಜಕ್ಕೆ ಪ್ರಬಲ ಸಂದೇಶವನ್ನೂ ನೀಡಬಲ್ಲದೆಂದು ಹೇಳಿದರು.

ಮಾಧ್ಯಮ ಕ್ಷೇತ್ರದಲ್ಲಿ ಸುದ್ದಿಗೆ ಜೀವಂತಿಕೆ ನೀಡುವಲ್ಲಿ ಛಾಯಾಚಿತ್ರದ ಪಾತ್ರ ಮಹತ್ವದ್ದು. ಆಧುನಿಕ ತಂತ್ರಜ್ಞಾನ ಎಷ್ಟೇ ಮುಂದುವರಿದರೂ ವಾಸ್ತವವನ್ನು ದಾಖಲಿಸುವ ವೃತ್ತಿಪರ ಛಾಯಾಗ್ರಾಹಕರ ಅಗತ್ಯ ಎಂದಿಗೂ ಕಡಿಮೆಯಾಗುವುದಿಲ್ಲವೆಂದು ಅಭಿಪ್ರಾಯಪಟ್ಟರು.

ಛಾಯಾಗ್ರಾಹಕರು ತಮ್ಮ ಸಂಘಟನೆಯನ್ನು ಮತ್ತಷ್ಟು ಬಲಪಡಿಸಿಕೊಳ್ಳಬೇಕು. ಎಲ್ಲರೂ ಸಂಘಟನೆ, ಒಗ್ಗಟ್ಟಿನಿಂದ ಇದ್ದರಷ್ಟೇ ಸರ್ಕಾರದಿಂದ ವಿವಿಧ ಸೌಲಭ್ಯ ಪಡೆಯಲು ಸಾಧ್ಯ. ವಿಶೇಷವಾಗಿ ಛಾಯಾಗ್ರಾಹಕರಿಗೆ ಆರೋಗ್ಯ, ಅಪಘಾತ ವಿಮೆ ಸೇರಿ ಅಗತ್ಯ ಸೌಲಭ್ಯಗಳು ದೊರೆಯುವಂತಾಗಬೇಕು. ಸದಸ್ಯರಲ್ಲಿ ಪರಸ್ಪರ ನಂಬಿಕೆ ಮೂಡಿಸುವ ಹಾಗು ಸಂಕಷ್ಟದ ಸಂದರ್ಭದಲ್ಲಿ ಕುಟುಂಬಗಳಿಗೆ ನೆರವಾಗುವ ರೀತಿಯಲ್ಲಿ ಸಂಘಟನೆ ಕಾರ್ಯನಿರ್ವಹಿಸಬೇಕೆಂದು ಕರೆ ನೀಡಿದರು.

ಇದೇ ವೇಳೆ ಇತ್ತೀಚೆಗೆ ನಿಧನರಾದ ನಂದಿ ಸ್ಟುಡಿಯೋ ಮಾಲೀಕ ನಂದ ಕುಮಾರ್ ಅವರ ಕುಟುಂಬಕ್ಕೆ ಕೆಪಿಎ ಆಸರೆ ಯೋಜನೆಯಡಿ 75 ಸಾವಿರ ರೂ. ಚೆಕ್ ವಿತರಿಸಲಾಯಿತು. ಛಾಯಾಗ್ರಾಹಕರ ಕುಟುಂಬದ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಛಾಯಾಗ್ರಾಹಕರ ನೂತನ ಕಟ್ಟಡ ನಿರ್ಮಾಣಕ್ಕೆ ಧನಸಹಾಯ ಮಾಡಿದ ಛಾಯಾಗ್ರಾಹಕರನ್ನೂ ಸನ್ಮಾನಿಸಿ ಗೌರವಿಸಲಾಯಿತು. ಅದಕ್ಕೂ ಮೊದಲು ನಗರದ ಪ್ರಮುಖ ರಸ್ತೆಗಳಲ್ಲಿ ಛಾಯಾಗ್ರಾಹಕರು ಬೈಕ್ ರ‍್ಯಾಲಿ ನಡೆಸಿದರು.

ತಾಲ್ಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಎಸ್.ಜಿ.ನಾಗರಾಜು, ಜಿಲ್ಲಾ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ನಿಂಗರಾಜು (ಸ್ವಾಮಿ), ಕಾರ್ಯದರ್ಶಿ ಧರ್ಮಶೆಟ್ಟಿ, ಸಂಸ್ಥಾಪಕ ಅಧ್ಯಕ್ಷ ವಿ.ಟಿ.ಆರ್. ರಮೇಶ್, ರಾಜ್ಯ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಹೆಚ್.ಎಸ್. ನಾಗೇಶ್, ರಾಜ್ಯ ಕಾರ್ಯದರ್ಶಿ ಸುರೇಶ್, ವಕೀಲರಾದ ಜಿ. ಸಂಜಯ್, ಪ್ರಮೋದ್‌ಗೌಡ, ರವಿಶಂಕರ್ ಮೊದಲಾದವರಿದ್ದರು. ಲಕ್ಷ್ಮೀನಾರಾಯಣ್ ಕಾರ್ಯಕ್ರಮ ನಿರೂಪಿಸಿದರು.

## ನಾಳೆ ಸರ್ವ ಸದಸ್ಯರ ಸಭೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣದ ಶಿವಕುಮಾರ ಸ್ವಾಮೀಜಿ ಸಹಕಾರ ಸಂಘದ 2025-26ನೇ ಸಾಲಿನ ಮೂರನೇ ವರ್ಷದ ಸರ್ವ ಸದಸ್ಯರ ಸಭೆ ಸೆ.5ರಂದು ಬೆಳಿಗ್ಗೆ 10 ಗಂಟೆಗೆ ಕೋಟೆ ಶ್ರೀ ಶಂಕರಮಠದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಹೆಚ್.ಆರ್.ಸುರೇಶ್ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘದಲ್ಲಿ 1,273 ಶೇರುದಾರರಿದ್ದು, 12.73 ಲಕ್ಷ ಮೂಲ ಬಂಡವಾಳ ಹೊಂದಿದೆ. ಪ್ರಸಕ್ತ ಸಾಲಿನಲ್ಲಿ ಸುಮಾರು 2.75 ಕೋಟಿ ವಹಿವಾಟು ನಡೆಸಿದ್ದು, 14.28 ಲಕ್ಷ ಗ್ರಾಸ್ ಪ್ರಾಫಿಟ್ ಹಾಗೂ 5,97,299 ನಿವ್ವಳ ಲಾಭ ಗಳಿಸಿದೆ. ತುರ್ತು ನಿಧಿಯಾಗಿ 10 ಲಕ್ಷ ರಿಸರ್ವ್ ಫಂಡ್ ಕಾಯ್ದಿರಿಸಲಾಗಿದೆ ಎಂದರು.

ಸಂಘದಲ್ಲಿ ನಿಶ್ಚಿತ ಠೇವಣಿಗೆ ಶೇ.9ರಷ್ಟು ಹಾಗೂ ಪಿಗ್ಮಿ ಠೇವಣಿಗೆ ಶೇ.4ರಷ್ಟು ಬಡ್ಡಿ ನೀಡಲಾ ಗುತ್ತಿದೆ. ಆಹ್ವಾನ ಪತ್ರಿಕೆ ತಲುಪದ ಸದಸ್ಯರು ಸೇರಿ ಎಲ್ಲಾ ಸಹಕಾರ ಬಂಧುಗಳು ಸಭೆಯಲ್ಲಿ ಭಾಗವಹಿಸಿ ಸಂಘದ ಅಭಿವೃದ್ಧಿಗೆ ಸಲಹೆ, ಮಾರ್ಗದರ್ಶನ ನೀಡಬೇಕೆಂದು ಮನವಿ ಮಾಡಿದರು. ನಿರ್ದೇಶಕರಾದ ತೆರಣ್ಯ ರವಿ, ಹೆಚ್.ಎಸ್.ಪ್ರಭಶಂಕರ್, ಎಂ.ಇ. ದೇವರಾಜು, ಬಿ.ಡಿ.ಚಂದ್ರಪ್ಪ, ಪ್ರವೀಣ್ ಆರಾಧ್ಯ, ಯು.ಎಸ್. ಹಾಗೂಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಂಜುನಾಥ್ ಉಪಸ್ಥಿತರಿದ್ದರು.

## ಕಾಡಾನೆ ದಾಳಿಯಿಂದ ಬೆಳೆ ಹಾನಿ : ಸ್ಥಳಕ್ಕೆ ಅರಣ್ಯಾಧಿಕಾರಿಗಳ ಭೇಟಿ

• ಪ್ರಜೋದಯ ವರದಿ

**ಸಕಲೇಶಪುರ:** ಕಾಡಾನೆಗಳ ಹಾವಳಿಯಿಂದ ಬೆಳೆ ಹಾನಿಗೊಳಗಾದ ನಡಹಳ್ಳಿ ಗ್ರಾಮದ ರೈತ ಧರ್ಮೇಂದ್ರ ಅವರ ಗದ್ದೆಗೆ ವಲಯ ಅರಣ್ಯಾಧಿಕಾರಿ ಹಾಗು ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

ಕಾಡಾನೆಗಳ ಹಿಂಡು ಗದ್ದೆಗೆ ನುಗ್ಗಿ ಬೆಳೆಗಳನ್ನು ತುಳಿದು ಹಾಗು ತಿಂದು ಹಾನಿಗೊಳಿಸಿರುವ ಬಗ್ಗೆ ರೈತರಿಂದ ಮಾಹಿತಿ ಪಡೆದುಕೊಂಡ ಅರಣ್ಯಾಧಿಕಾರಿ, ಹಾನಿಗೊಳಗಾದ ಪ್ರದೇಶವನ್ನು ಪರಿಶೀಲಿಸಿ ಬೆಳೆ ನಷ್ಟದ ವಿವರಗಳನ್ನು ದಾಖಲಿಸಿಕೊಂಡರು.

ಈ ಸಂದರ್ಭದಲ್ಲಿ ರೈತರಿಗೆ ಕಾಡಾನೆಗಳ ಚಲನವಲನದ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ಸೂಚಿಸಿದ ಅಧಿಕಾರಿಗಳು, ಬೆಳಿಗ್ಗೆ ಹಾಗು ಸಂಜೆ ಸಮಯದಲ್ಲಿ ಒಬ್ಬರೇ ತೋಟ, ಗದ್ದೆಗಳಿಗೆ ತೆರಳದಂತೆ ಸಲಹೆ ನೀಡಿದರು. ಕಾಡಾನೆಗಳು ಕಾಣಿಸಿಕೊಂಡಲ್ಲಿ ಅವುಗಳನ್ನು ಓಡಿಸಲು ಮುಂದಾಗದೆ ಕೂಡಲೇ ಅರಣ್ಯ ಇಲಾಖೆಗೆ ಮಾಹಿತಿ ನೀಡಬೇಕು.

ಬೆಳೆ ಹಾನಿಗೊಳಗಾದ ರೈತ ಧರ್ಮೇಂದ್ರ ಅವರಿಗೆ ಸರ್ಕಾರದ ನಿಯಮಾನುಸಾರ ಸೂಕ್ತ ಪರಿಹಾರ ದೊರಕಿಸಿಕೊಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿ ನಿರಂತರವಾಗಿ ಕಂಡುಬರುತ್ತಿದ್ದು, ರೈತರ ಬೆಳೆ ಹಾಗು ಜೀವ ರಕ್ಷಣೆಗೆ ಅರಣ್ಯ ಇಲಾಖೆ ಹೆಚ್ಚಿನ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

## ಕಿದ್ವಾಯಿ ಪ್ರಾದೇಶಿಕ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ತೆರೆಯಲು ಮನವಿ



• ಪ್ರಜೋದಯ ವರದಿ

**ಹಾಸನ:** ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನಲೆ ಬಡ ಹಾಗು ಮಧ್ಯಮ ವರ್ಗದ ರೋಗಿಗಳಿಗೆ ಅನುಕೂಲವಾಗುವಂತೆ ಹಾಸನದಲ್ಲೇ ಕಿದ್ವಾಯಿ ಪ್ರಾದೇಶಿಕ ಕ್ಯಾನ್ಸರ್ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಜಿಲ್ಲಾ ಸಮಿತಿಯ ನಿಯೋಗವು ಗುರುವಾರ ಜಿಲ್ಲಾಡಳಿತದ ಮೂಲಕ ಮುಖ್ಯಮಂತ್ರಿ, ಆರೋಗ್ಯ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘಟನೆಯ ಮುಖಂಡರು, ಹಾಸನ ಹಾಗು ಸುತ್ತ ಮುತ್ತಲಿನ ಮಲೆನಾಡು ಮತ್ತು ಬಯಲುಸೀಮೆ ಭಾಗಗಳಲ್ಲಿ ಸಕ್ರಿಯ ಕ್ಯಾನ್ಸರ್ ರೋಗಿಗಳು ಹೆಚ್ಚುತ್ತಿದ್ದಾರೆ. ಹಾಸನ ಜಿಲ್ಲೆಯೊಂದರಲ್ಲೇ ಪ್ರತಿ ವರ್ಷ 1,500 ರಿಂದ 2,000 ಹೊಸ ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗುತ್ತಿವೆ. ಹಾಸನ, ಚಿಕ್ಕಮಗಳೂರು, ಕೊಡಗು, ಮಂಡ್ಯ ಹಾಗು ತುಮಕೂರು ಗಡಿಭಾಗಗಳ ನೂರಾರು ರೋಗಿಗಳು ಸೂಕ್ತ ಚಿಕಿತ್ಸೆಗೆ ಪರದಾಡುತ್ತಿದ್ದಾರೆಂದು ತಿಳಿಸಿದರು.

ಗ್ರಾಮೀಣ ಭಾಗದಲ್ಲಿ ಸರಿಯಾದ ತಪಾಸಣಾ ಸೌಲಭ್ಯಗಳಿಲ್ಲದೆ ರೋಗಿಗಳು ಕೊನೆಯ ಹಂತದಲ್ಲಿ (3ನೇ ಅಥವಾ 4ನೇ ಹಂತ) ಆಸ್ಪತ್ರೆಗೆ ತಲುಪುತ್ತಿರುವುದರಿಂದ ಸಾವು-ನೋವು ಹೆಚ್ಚುತ್ತಿವೆ. ಪ್ರಸ್ತುತ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ರೇಡಿಯೋಥೆರಪಿ ವಿಭಾಗವಿದ್ದರೂ ತಜ್ಞ ವೈದ್ಯರು, ತಂತ್ರಜ್ಞರು ಹಾಗು ಹಾಸಿಗೆಗಳ ಅಭಾವವಿದೆ. ಅತ್ಯಾಧುನಿಕ ಲಿನಿಯರ್ ಆಕ್ಸಿ ಲರೇಟರ್ ಮತ್ತು ಸ್ಕ್ಯಾನ್ ಸೌಲಭ್ಯಗಳಿಲ್ಲದೆ ಬಡ ರೋಗಿಗಳು ಕಡ್ಡಾಯವಾಗಿ ಬೆಂಗಳೂರು, ಮೈಸೂರು ಅಥವಾ ಮಂಗಳೂರಿನ ಖಾಸಗಿ ಆಸ್ಪತ್ರೆಗಳಿಗೆ ಅಲೆಯುವಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸಾಮಾನ್ಯ ಜಿಲ್ಲಾ ಆಸ್ಪತ್ರೆಗಳಲ್ಲಿ ಸೂಪರ್ ಸ್ಪೆಷಾಲಿಟಿ ವೈದ್ಯರ ನೇಮಕ ವಿಳಂಬವಾಗುತ್ತದೆ. ಆದರೆ ಕಿದ್ವಾಯಿ ಸಂಸ್ಥೆಯು ಸ್ವಾಯತ್ತತೆ ಹೊಂದಿರುವುದರಿಂದ, ಕಲಬುರಗಿ ಮತ್ತು ಮೈಸೂರು ಮಾದರಿಯಲ್ಲಿ ಹಾಸನದಲ್ಲೂ ಸ್ಯಾಟಲೈಟ್ ಘಟಕ ಆರಂಭಿಸಿದರೆ ನೇರವಾಗಿ ತಜ್ಞ ವೈದ್ಯರ ನೇಮಕ ಹಾಗು ಆಡಳಿತ ನಿರ್ವಹಣೆ ಸುಲಭವಾಗುತ್ತದೆ. ರಾಷ್ಟ್ರೀಯ ಕ್ಯಾನ್ಸರ್ ನಿಯಂತ್ರಣ ಕಾರ್ಯಕ್ರಮದಡಿ ಸಿಗುವ ಅತ್ಯಾಧುನಿಕ ಉಪಕರಣಗಳು ಮತ್ತು ಅನುದಾನ ನೇರವಾಗಿ ಹಾಸನಕ್ಕೆ ದೊರೆಯಲಿದೆ ಎಂದು ಮನವಿ ಪತ್ರವನ್ನು ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಅವರಿಗೆ ಸಲ್ಲಿಸಿದರು.

ಈ ವೇಳೆ ಡಿವೈಎಫ್ಐ ಜಿಲ್ಲಾ ಸಂಚಾಲಕರಾದ ಪೃಥ್ವಿ, ಸಹ ಸಂಚಾಲಕರಾದ ಕುಶ, ಎಸ್ಎಫ್ಐ ಜಿಲ್ಲಾ ಕಾರ್ಯದರ್ಶಿ ರಮೇಶ್, ಮುಖಂಡರಾದ ನಯೀಮ್, ಸುಪ್ರೀತ ಭಾಗವಹಿಸಿದ್ದರು.

## ವಾಹನಗಳಿಗೆ ದಾರಿ ಬಿಟ್ಟ ಕಾಡಾನೆ



• ಪ್ರಜೋದಯ ವರದಿ

**ಅರೇಹಳ್ಳಿ:** ಸಾಮಾನ್ಯವಾಗಿ ಕಾಡಾನೆಗಳು ರಸ್ತೆ ದಾಟುವ ವೇಳೆ ವಾಹನ ಸವಾರರು ದೂರದಲ್ಲಿ ನಿಂತು ಅವುಗಳಿಗೆ ದಾರಿ ಮಾಡಿಕೊಡುವುದು ಸಾಮಾನ್ಯ. ಇಲ್ಲೊಂದು ಕಾಡಾನೆ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟು ಬಳಿಕ ರಸ್ತೆ ದಾಟಿರುವ ಅಪರೂಪದ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಕೋಗೋಡು ಗ್ರಾಮದ ಬೇಡಿ ಅವರ ಎಸ್ಟೇಟ್‌ನ ಸಮೀಪ ಕಾಡಾನೆಯೊಂದು ಒಂದು ತೋಟದಿಂದ ಮತ್ತೊಂದು ತೋಟಕ್ಕೆ ತೆರಳಲು ರಸ್ತೆ ದಾಟುತ್ತಿದ್ದ ವೇಳೆ ಏಕಾಏಕಿ ಬಂದ ವಾಹನಗಳನ್ನು ಗಮನಿಸಿದೆ. ಕೂಡಲೇ ರಸ್ತೆ ಬದಿಯಲ್ಲಿ ಕೆಲಕಾಲ ನಿಂತ ಆನೆ, ವಾಹನಗಳು ಸಂಚರಿಸಲು ಅನುವು ಮಾಡಿಕೊಟ್ಟ ಬಳಿಕ ನಿಧಾನವಾಗಿ ರಸ್ತೆ ದಾಟಿ ತನ್ನ ದಾರಿಯಲ್ಲಿ ಸಾಗಿತು.

ಕಾಡಾನೆಯ ಈ ಅಪರೂಪದ ವರ್ತನೆಯ ದೃಶ್ಯ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಸಾರ್ವಜನಿಕರ ಗಮನ ಸೆಳೆಯುತ್ತಿದೆ.

## ಟಾಟಾ ಶೋ ರೂಂ ಎದುರು ಕಾರು ಮಾಲೀಕರ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ರಿಪೇರಿಗೆಂದು ಶೋರೂಂಗೆ ಬಿಟ್ಟಿದ್ದ ಕಾರನ್ನು ವಾಪಾಸ್ ನೀಡದೆ ವಿಳಂಬ ಮಾಡುತ್ತಿದ್ದಾರೆಂದು ಆರೋಪಿಸಿ ನಗರದ ತಣ್ಣೀರುಹಳ್ಳದಲ್ಲಿರುವ ಟಾಟಾ ಶೋ ರೂಂ ಎದುರು ಕಾರು ಮಾಲೀಕರು ಗುರುವಾರ ಪ್ರತಿಭಟನೆ ನಡೆಸಿದರು.

ಸಕಲೇಶಪುರದ ಲೋಹಿತ್ ಜಂಬರಡಿ ಎಂಬುವವರು ಎರಡು ವರ್ಷದ ಹಿಂದೆ ಟಾಟಾ ಮೋಟಾರ್ಸ್‌ನಲ್ಲಿ ನೆಕ್ಸಾ ನ್ ಇವಿ ಮ್ಯಾಕ್ಸ್ ಎಲೆಕ್ಟ್ರಾನಿಕ್ ಕಾರನ್ನು ಖರೀದಿಸಿದ್ದರು. ಏ.26 ರಂದು ನಡೆದ ಅಪಘಾತದಲ್ಲಿ ಕಾರು ಡ್ಯಾಮೇಜ್ ಆಗಿದ್ದು, ಅಂದು ರಿಪೇರಿಗೆಂದು ಶೋ ರೂಂಗೆ ಕಾರು ಬಿಟ್ಟಿದ್ದರು. ನಾಲ್ಕು ತಿಂಗಳು ಹತ್ತು ದಿನ ಕಳೆದರು ಕಾರು ರಿಪೇರಿ ಮಾಡಿ ವಾಪಾಸ್ ನೀಡಿಲ್ಲ ಎಂದು ಟಾಟಾ ಶೋ ರೂಂ ಎದುರು ಪ್ರತಿಭಟನೆ ನಡೆಸಿ ಶೋರೂಂ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶೋರೂಂನ ಸಿಬ್ಬಂದಿ ವಿನಾಕಾರಣ ವಿಳಂಬ ಮಾಡುತ್ತಿದ್ದು, ಪ್ರಶ್ನಿಸಿದರೆ ಉಡಾಫೆ ಉತ್ತರ ನೀಡುತ್ತಿದ್ದಾರೆ. ಅವರು ರಿಪೇರಿ ಮಾಡುವಾಗ ಬಳಸುತ್ತಿರುವ ವಸ್ತುಗಳ ಬಗ್ಗೆ ಸರಿಯಾದ ಮಾಹಿತಿ ನೀಡುತ್ತಿಲ್ಲ. ಶೋರೂಂನಲ್ಲಿ



ಪಾರದರ್ಶಕತೆ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ರಿಪೇರಿ ಮಾಡಿ ಕಾರು ನೀಡಬೇಕು ಇಲ್ಲವಾದಲ್ಲಿ ಶೋರೂಂ ಎದುರು ಅನಿರ್ಧಿಷ್ಠಾವಧಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಬ್ಯಾಂಕ್ ಮ್ಯಾನೇಜರ್ ಗಿರೀಶ್ ಬಳ್ಳಾರೆ ಮೋಟಾರ್ ಹಾಗೂ ಬ್ಯಾಟರಿಯನ್ನು ಬೇರೆಡೆಯಿಂದ ತರಿಸಬೇಕು ಹಾಗಾಗಿ ತಡವಾಗಿದೆ. ಅದನ್ನು ಬಿಟ್ಟರೆ ಬೇರೆ ಯಾವುದೇ ಕಾರಣ ಇಲ್ಲ. ಇನ್ನೂ ಹದಿನೈದು ದಿನಗಳಲ್ಲಿ ಕಾರು ರಿಪೇರಿ ಮಾಡಿ ಕೊಡಲಾಗುವುದೆಂದು ತಿಳಿಸಿದ್ದಾರೆ.

ಟಾಟಾ ಸರ್ವಿಸ್ ಸೆಂಟರ್‌ಗೆ ರಿಪೇರಿಗೆಂದು ಬಿಟ್ಟ ಕಾರುಗಳನ್ನು ಸರಿಯಾದ ಸಮಯಕ್ಕೆ ನೀಡದೆ ಅನಗತ್ಯವಾಗಿ ವಿಳಂಬ ಮಾಡಲಾಗುತ್ತಿದೆಂದು ಇತರೆ ಗ್ರಾಹಕರು ಆರೋಪಿಸಿದರು.

## ಜೈವಿಕ ಇಂಧನ ಬೆಳೆಗಳಿಂದ ರೈತರಿಗೆ ಹೆಚ್ಚು ಆದಾಯ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:**ಜೈವಿಕ ಇಂಧನ ಬೆಳೆಗಳ ಕೃಷಿಯು ರೈತರಿಗೆ ಪರ್ಯಾಯ ಆದಾಯದ ಮೂಲವಾಗುವುದರ ಜೊತೆಗೆ ಪರಿಸರ ಸಂರಕ್ಷ ಣೆಗೂ ಸಹಕಾರಿಯಾಗಿದೆ ಎಂದು ಮಡೇನೂರು ಜೈವಿಕ ಇಂಧನ ಉದ್ಯಾನವನದ ಕ್ಷೇತ್ರ ಅಧಿಕಾರಿ ಬಸವರಾಜು ಅವರು ಹೇಳಿದರು.

ಹಾಸನದ ಕಾರೆಕೆರೆ ಕೃಷಿ ಮಹಾ ವಿದ್ಯಾಲಯದ ಬಿಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ತಾಲ್ಲೂಕಿನ ಚೌಡೇನಹಳ್ಳಿಯಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಜೈವಿಕ ಇಂಧನ ಬೆಳೆಗಳ ಮಹತ್ವ ಕುರಿತ ಮಾಹಿತಿ ಕಾರ್ಯಾಗಾರದಲ್ಲಿ ಮಾತನಾಡಿ, ಜೈವಿಕ ಇಂಧನ ಬೆಳೆಗಳ ಮಹತ್ವ, ಅವುಗಳ ಕೃಷಿ ವಿಧಾನ, ಬಳಕೆ ಹಾಗು ಇಂಧನ ಉತ್ಪಾದನೆಯಲ್ಲಿ ಅವುಗಳ ಪಾತ್ರದ ಕುರಿತು ವಿವರಿಸಿದರು. ಕೃಷಿ ಅವಶೇಷಗಳು ಹಾಗು ವಿವಿಧ ಸಸ್ಯ ಮೂಲಗಳನ್ನು ಸದುಪಯೋಗಪಡಿಸಿ ಕೊಂಡು ಜೈವಿಕ ಇಂಧನ ಉತ್ಪಾದಿ ಸುವ ಮೂಲಕ ತ್ಯಾಜ್ಯ ನಿರ್ವಹಣೆಯ ಜೊತೆಗೆ ಪರ್ಯಾಯ ಇಂಧನ ಮೂಲ ಗಳನ್ನು ಅಭಿವೃದ್ಧಿ ಪಡಿಸ ಬಹು ದೆಂದರು.

ಸಂಪನ್ಮೂಲ ವ್ಯಕ್ತಿ ರಘು ಅವರು ಮಾತನಾಡಿ, ಉದ್ಯಾನವನದಲ್ಲಿ ಲಭ್ಯವಿರುವ ವಿವಿಧ ಜೈವಿಕ ಇಂಧನ ಬೆಳೆಗಳು ಹಾಗು ಅವುಗಳಿಂದ ದೊರೆಯುವ ಉಪ ಉತ್ಪನ್ನಗಳ ಕುರಿತು ಮಾಹಿತಿ ನೀಡಿದರು. ಜೈವಿಕ ಇಂಧನ ಬೆಳೆಗಳ ವೈವಿಧ್ಯ, ಉಪಯೋಗ ಮತ್ತು ರೈತರಿಗೆ ದೊರೆಯಬಹುದಾದ ಪ್ರಯೋಜನಗಳ ಬಗ್ಗೆ ವಿವರಿಸಿದರು.

ಜೈವಿಕ ಇಂಧನವು ಸಾಂಪ್ರದಾಯಿಕ ಇಂಧನ ಮೂಲಗಳಿಗೆ ಪರ್ಯಾಯವಾಗಿದ್ದು, ಭವಿಷ್ಯದಲ್ಲಿ ಬೇಡಿಕೆ ಹೆಚ್ಚುವ ಸಾಧ್ಯತೆಯಿದೆ. ರೈತರು ಜೈವಿಕ ಇಂಧನ ಬೆಳೆಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು, ಸ್ಥಳೀಯ ಪರಿ ಸ್ಥಿತಿಗೆ ಅನುಗುಣವಾಗಿ ಬೆಳೆ ಬೆಳೆಯು ವತ್ತ ಗಮನಹರಿಸಬೇಕೆಂದರು. ಒಟ್ಟು 83 ಗ್ರಾಮಸ್ಥರು ಭಾಗವಹಿಸಿದ್ದರು.

## ರಾಜ್ಯದಲ್ಲಿ ಬರ: ಚರ್ಚೆಗೆ ವಿಶೇಷ ಅಧಿವೇಶನ

» ಮೊದಲನೇ ಪುಟದಿಂದ

ಸ್ವಾಗತ ಮಾಡಿ, ಮುಖ್ಯಮಂತ್ರಿ ಭೇಟಿ ಮಾಡಿಸಿ ಅವರ ಪ್ರಸ್ತಾವನೆಗಳನ್ನ ಸ್ವೀಕಾರ ಮಾಡುವುದಾಗಿದೆ. ಇದು ಜಾಗತಿಕ ವೈದ್ಯಕೀಯ, ಪ್ರವಾಸೋದ್ಯಮ ಒಳಗೊಂಡಿದೆ. ಹಲವರು ಸಚಿವರ ತಂಡ ಈ ಸಮಿತಿಯಲ್ಲಿ ಇರಲಿದೆ ಎಂದು ಹೇಳಿದರು.

**ಫೆಸಿಲಿಟೇಷನ್ ಕೌನ್ಸಿಲ್ ರಚನೆ**

ವಿದೇಶಾಂಗ ವ್ಯವಹಾರಗಳ ಇಲಾಖೆಯ ಜೊತೆಗೆ ಸ್ಟೇಟ್ ಫೆಸಿಲಿಟೇಷನ್ ಕೌನ್ಸಿಲ್ ಕೂಡ ಮಾಡಲು ತೀರ್ಮಾನ ಮಾಡಿದ್ದೇವೆ. ಈ ಕೌನ್ಸಿಲ್‌ಗೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ. ಉಪ ಮುಖ್ಯಮಂತ್ರಿಗಳು ಉಪಾಧ್ಯಕ್ಷರಾದರೆ, ಇಂಡಸ್ಟ್ರಿ , ಕೃಷಿ, ತೋಟಗಾರಿಕೆ, ಐಟಿ ಬಿಟಿ , ಅರ್ಬನ್ ಡೆವಲಪ್ಮೆಂಟ್, ಬೆಂಗಳೂರು ಡೆವಲಪ್ಮೆಂಟ್, ಹೈಯರ್ ಎಜುಕೇಶನ್, ಪವರ್, ಹೆಲ್ತ್, ಸ್ಪೋರ್ಟ್ಸ್ ಮತ್ತು ಮೆಡಿಕಲ್ ಎಜುಕೇಶನ್ ಮಂತ್ರಿಗಳೆಲ್ಲ ಸದಸ್ಯರುಗಳಾಗಿರುತ್ತಾರೆ. ಇದು ಸ್ಟೇಟ್ ಫೆಸಿಲಿಟೇಷನ್ ಕೌನ್ಸಿಲ್ ಆಗಿರಲಿದೆ ಎಂದು ಮಾಹಿತಿ ನೀಡಿದರು.

# ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆಗೆ ಗೋ ಪೂಜೆ



• ಪ್ರಜೋದಯ ವರದಿ

**ಹಾಸನ:** ನಗರದ ಮಹಾವೀರ ವೃತ್ತದಲ್ಲಿ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆಯ ಅಂಗ ವಾಗಿ ಗುರುವಾರ ಗೋ, ಭಾರತ ಮಾತೆ ಪೂಜೆ ಹಾಗು ಧ್ವಜಾರೋಹಣ ನೆರವೇರಿಸುವ ಮೂಲಕ ಈ ಬಾರಿಯ ಗಣೇಶೋತ್ಸವಕ್ಕೆ ಚಾಲನೆ ನೀಡಲಾಯಿತು.

ಪೂಜಾ ಕೈಂಕರ್ಯ ನೆರವೇರಿಸಿ ಮಾತನಾಡಿದ ತಣ್ಣೀರುಹಳ್ಳ ಮಠದ ಶ್ರೀ ವಿಜಯ ಕುಮಾರ ಸ್ವಾಮೀಜಿ, ಸಮಾಜದ ಎಲ್ಲಾ ವರ್ಗದ ಜನರು ಪರಸ್ಪರ ಪ್ರೀತಿ, ವಿಶ್ವಾಸ ಹಾಗು ಸಹೋದರ ತ್ವದಿಂದ ಬದುಕಬೇಕು. ಸಂಘಟನೆಯ ಮೂಲಕ ಸಮಾಜವನ್ನು ಬಲಪಡಿಸುವ ಅಗತ್ಯವಿದ್ದು, ಬಸವಣ್ಣನವರ ಇವ ನಮ್ಮವ ಎಂಬ ಆಶಯದಂತೆ ಒಗ್ಗಟ್ಟಿನಿಂದ ಮುನ್ನಡೆಯಬೇಕೆಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ಮಾತನಾಡಿ, ಗಣೇಶೋತ್ಸವವು ಏಕತೆ ಹಾಗು ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿದೆ. ಗೋ ಪೂಜೆ ಮತ್ತು ಧ್ವಜಾರೋಹಣದೊಂದಿಗೆ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆಯ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಜಿಲ್ಲೆಯಲ್ಲಿ ಪಾಂಚಜನ್ಯ ಗಣಪತಿ ಎಂದೇ ಪ್ರಸಿದ್ಧಿ ಪಡೆದಿರುವ ಈ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಿದ್ಧತೆ ನಡೆಸಲಾಗಿದೆ ಎಂದರು.

ನಗರದ ವಿವಿಧ ಪ್ರಮುಖ ಮಾರ್ಗಗಳಲ್ಲಿ ಗಣಪತಿ ಮೆರವಣಿಗೆ ನಡೆಸಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವಂತೆ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಧಾರ್ಮಿಕ ಆಚರಣೆಯ ಜೊತೆಗೆ ಸಾಮಾಜಿಕ ಹಾಗು ಸಾಂಸ್ಕೃತಿಕ ಸಂದೇಶವನ್ನು ಸಾರುವ ಉತ್ಸವವಾಗಿ ಗಣೇಶೋತ್ಸವ ಹೊರ ಹೊಮ್ಮಲಿದೆ ಎಂದು ಹೇಳಿದರು.

ವಿಶ್ವ ಹಿಂದೂ ಪರಿಷತ್ ರಾಜ್ಯ ಸಹಕಾರ್ಯದರ್ಶಿ ಮಹಿಪಾಲ್ ಅವರು ಮಾತನಾಡಿ, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಲೋಕಮಾನ್ಯ ತಿಲಕರು ಜನರನ್ನು ಒಗ್ಗೂಡಿಸುವ ಉದ್ದೇಶದಿಂದ ಸಾರ್ವಜನಿಕ ಗಣೇಶೋತ್ಸವಕ್ಕೆ ಚಾಲನೆ ನೀಡಿದ್ದರು. ಅಂದಿನಿಂದ ಉತ್ಸವವು ಸಾಮಾಜಿಕ ಒಗ್ಗಟ್ಟು ಮತ್ತು ರಾಷ್ಟ್ರೀಯ ಚಿಂತನೆ ಬೆಳೆಸುವ ಪ್ರಮುಖ ವೇದಿಕೆಯಾಗಿ ಬೆಳೆದಿದೆ ಎಂದು ಹೇಳಿದರು.

ಮುಖಂಡರಾದ ವಾಸುದೇವ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ನಗರಸಭೆ ಮಾಜಿ ಅಧ್ಯಕ್ಷ ಆರ್. ಮೋಹನ್, ರಕ್ಷಿತ್ ಶೆಟ್ಟಿ, ಪ್ರದೀಪ್ ಶರ್ಮ, ವಿಜಯಕುಮಾರ್, ಮೋಹನ್, ಸಾಯಿ ಪ್ರಸಾದ್, ದಯಾನಂದ್, ರಾಜೀವ್, ಪ್ರಸನ್ನಕುಮಾರ್, ಸುರೇಶ್ ಇತರರಿದ್ದರು.

## ಶಿಕ್ಷಣದ ಜೊತೆಗೆ ವೃತ್ತಿ ಆಧಾರಿತ ಕೌಶಲ ಅಗತ್ಯ



**ಚನ್ನರಾಯಪಟ್ಟಣ:** ಶಿಕ್ಷಣದಲ್ಲಿ ಅಂಕಗಳ ಜೊತೆಗೆ ಮುಂದಿನ ಜೀವನಕ್ಕಾಗಿ ವೃತ್ತಿ ಆಧಾರಿತ ಕೌಶಲವನ್ನು ಕಲಿಯಬೇಕಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಹೋಬಳಿ ಘಟಕದ ಅಧ್ಯಕ್ಷ ಶಿವರಾಜ್ ಅವರು ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಬಾಲಕರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಿಸಿ ಮಾತನಾಡಿದ ಅವರು, ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಹೊಸ ವಿಷಯಗಳ ಆವಿಷ್ಕಾರಗಳು ನಡೆಯುತ್ತಿವೆ. ನಾವು ತಂತ್ರಜ್ಞಾನವನ್ನು ಬಳಸಿಕೊಂಡು ಬದುಕನ್ನು ನಡೆಸ ಬೇಕಿದೆ. ಅದಕ್ಕೆ ತಕ್ಕಂತೆ ವಿದ್ಯಾಭ್ಯಾಸ ಮಾಡಬೇಕಿದೆ ಎಂದರು.

ಮುಖ್ಯ ಶಿಕ್ಷಕಿ ಚಂದ್ರಕಲಾ ಅವರು ಮಾತನಾಡಿ, ಪ್ರತಿವರ್ಷ ಕರವೇ ಘಟಕದಿಂದ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ನೀಡುತ್ತಿದ್ದಾರೆ. ಉತ್ತಮವಾಗಿ ಓದಿ ಶಾಲೆಗೆ, ಪೋಷಕರಿಗೆ ಹೆಸರು ತರಬೇಕು ಎಂದು ತಿಳಿಸಿದರು. ಶಿಕ್ಷಕ ಹಿರಿಯಣ್ಣಗೌಡ ಮಾತನಾಡಿದರು. ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಹೇಶ್, ರವಿಕುಮಾರ್ ಮತ್ತು ಸಹ ಶಿಕ್ಷಕರು ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019